ಜನಜಾಗೃತಿ ಮಾಲೆ - ೩

ಭೀಕರ ಮೌಢ್ಯ

ಡಿ. ಎ. ಉಪಾಧ್ಯ

ಜೀವಿಕ

ಜೀತ ವಿಮುಕ್ತ ಕರ್ನಾಟಕ

೧೨೮೯, ಐಸೆಕ್ ರಸ್ತೆ,
ನಾಗರಭಾವಿ ಅಂಚೆ,
ಬೆಂಗಳೂರು - ೫೬೦ ೦೭೨
ದೂರವಾಣಿ: ೩೨೧೦೧೯೪
email - jeevika@vsnl.com

೬ ಡಿಸೆಂಬರ್ ೨೦೦೨

ಪ್ರತಿಗಳು: ೧೦೦೦೦

ಮೂಢನಂಬಿಕೆಗಳ ವಿನಾಶಕ್ಕೆ ಚೆನ್ನೋಟ: ಜೀವಿಕದ ಆಶಯ

ಜೀತ ವಿಮುಕ್ತಿ ಕರ್ನಾಟಕ – ಜೀವಿಕ – ಬಂಧನ ಮುಕ್ತ ಜೀವನ ತನ್ನ ಜನಜಾಗೃತಿ ಮಾಲೆಯಲ್ಲಿ ಮೂಢನಂಬಿಕೆಗಳ ವಿರುದ್ಧ ಸಮರ ಸಾರಲು ಡಿ.ಎ. ಉಪಾಧ್ಯರ 'ಭೀಕರ ಮೌಢ್ಯ' ಮತ್ತು ಬಿ.ಎ.ಮಧುರವರ 'ಮೂಢನಂಬಿಕೆಗಳು' ಎಂಬ ಕಿರುಪುಸ್ತಕಗಳನ್ನು ಪ್ರಕಟಿಸುತ್ತಿದೆ. ಜೀತ ವಿನಾಶದಲ್ಲಿ ಮತ್ತು ಅದಕ್ಕೂ ಮಿಗಿಲಾಗಿ ಬಂಧನ ಮುಕ್ತ ಸಮಗ್ರ ಜೀವನದಲ್ಲಿ ಮೂಢನಂಬಿಕೆಗಳನ್ನು ಗುರುತಿಸಿ ಅವನ್ನು ಹೊರಗೆ ಹಾಕಿ ಅವುಗಳ ಜಾಗದಲ್ಲಿ ಅರ್ಥ ಪೂರ್ಣ ನಿಲುವುಗಳನ್ನೂ ಮೌಲ್ಯಗಳನ್ನೂ ಅಂಗೀಕರಿಸಿ ವೈಚಾರಿಕ ಹಾಗೂ ವೈಜ್ಞಾನಿಕ ಮನೋಭಾವಗಳನ್ನು ರೂಢಿಸಿ ಕೊಳ್ಳುವುದು ಅಗತ್ಯವಾಗಿ ಜರುಗಬೇಕಾದ ಕೆಲಸವಾಗಿದೆ. ಜೀವಿಕ ಬಳಗ ಹಾಗೂ ಅದು ಬೆಂಬಲಿಸುತ್ತಿರುವ ಕರ್ನಾಟಕ ಜೀತದಾಳು ಮತ್ತು ಕೃಷಿ ಕಾರ್ಮಿಕ ಒಕ್ಕೂಟದ ಕೆಲ ಸದಸ್ಯರು ಈಗಾಗಲೇ ತಮ್ಮ ದೈನಂದಿನ ಜೀವನದಲ್ಲಿ ಹಾಸು ಹೊಕ್ಕಿರುವ ವಿವಿಧ ಮೂಢನಂಬಿಕೆಗಳನ್ನು ಗುರುತಿಸಿ ಅವುಗಳನ್ನು ವಿಶ್ಲೇಷಿಸುವ ಕೆಲಸ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಮೇಲೆ ನಮೂದಿಸಿದ ಎರಡು ಪುಸ್ತಿಕೆಗಳ ಪರಿಚಯವಾಗಿ ಅವನ್ನು ತಮ್ಮ ಚರ್ಚಾಕೂಟಗಳಲ್ಲಿ ಈಗಾಗಲೇ ಬಳಸುತ್ತಿದ್ದಾರೆ. ಅವುಗಳ ಪ್ರಯೋಜನ ಇನ್ನೂ ವ್ಯಾಪಕವಾಗಿ ನಮ್ಮ ಕರ್ನಾಟಕದ ಜನರೆಲ್ಲರೂ ಪ್ರತ್ಯೇಕವಾಗಿ ಯುವ ಮಿತ್ರರು ಪಡೆಯಲಿ ಎಂಬ ಉದ್ದೇಶದಿಂದ ಅವನ್ನು ಕಡಿಮೆ ಖರ್ಚಿನಲ್ಲಿ ಹೊರತರುವ ಯೋಜನೆಗೆ ಪುಸ್ತಿಕೆಗಳ ಬರಹಗಾರರು ಒಪ್ಪಿದ್ದಾರೆ. ಅವನ್ನು ಜೀವಿಕವು ಮುದ್ರಿಸಿ ಜನರಿಗೆ ಹಂಚಲಿಕ್ಕೆ ಅನುಮತಿ ನೀಡಿದ್ದಾರೆ. ಅದಕ್ಕೆ ಜೀವಿಕವು ಆಭಾರಿಯಾಗಿದೆ.

ಮೂಢನಂಬಿಕೆಗಳನ್ನು ಗುರುತಿಸಿ ಅವನ್ನು ಕಿತ್ತೊಗೆಯುವಾಗ ಅವುಗಳ ಜಾಗದಲ್ಲಿ ತುಂಬಿಕೊಳ್ಳಬೇಕಾದ ವಿಷಯಗಳಾವುವು? ಒಂದು ಮಾನವತೆಯನ್ನು ಎತ್ತಿಹಿಡಿಯುವ ನ್ಯಾಯ, ಸಮಾನತೆ, ಸ್ವಾತಂತ್ರ್ಯ, ಸೋದರತ್ವದ ನಿಲುವುಗಳು ಅಥವಾ ಮೌಲ್ಯಗಳು. ಅವನ್ನು ವೈಯಕ್ತಿಕ ದೃಷ್ಟಿಕೋನಗಳಲ್ಲೂ ಸಾಮಾಜಿಕ ರಚನೆಗಳಲ್ಲೂ ಪ್ರತಿಪಾದಿಸ ಬೇಕಾಗುತ್ತದೆ. ಜೊತೆಗೆ ಮಾನವ ಜೀವನವನ್ನು ಆವರಿಸಿರುವಂತೆ ತಿಳಿದುಕೊಳ್ಳಲಾದ 'ನಿಗೂಢ ಶಕ್ತಿ'ಗಳ ಬಗ್ಗೆ ಸರಿಯಾದ ಜ್ಞಾನ ಮೂಡಿಬರಬೇಕು. ಈ ನಿಟ್ಟಿನಲ್ಲಿ ವೈಜ್ಞಾನಿಕ ಹಾಗೂ ವೈಚಾರಿಕ ನೋಟಗಳನ್ನು ಬೆಳೆಸಬೇಕಾಗುತ್ತದೆ. ವಿವಿಧ ವಿಜ್ಞಾನಗಳ ತಕ್ಕಮಟ್ಟಿಗಿನ ಜ್ಞಾನದ ಜೊತೆಗೆ 'ಅಧ್ಯಾತ್ಮಿಕತೆ' ಬಗ್ಗೆಯೂ ಸ್ಪಷ್ಟವಾದ ನಿಲುವುಗಳ ಅವಶ್ಯಕತೆ ಇದೆ. ಡಿ.ಎ. ಉಪಾಧ್ಯರವರು ತಮ್ಮ ಪುಸ್ತಿಕೆಯ 'ಅಂತರಂಗದ ಮಾತಿ'ನಲ್ಲಿ "ಈ ಪ್ರಪಂಚದಲ್ಲಿ ಸಾರ್ವತ್ರಿಕವಾದ ಚೇತನಶಕ್ತಿಯೊಂದಿದೆ ಎನ್ನುವುದು ನಿರ್ವಿವಾದ. ಅದಕ್ಕೆ ಮಾತ್ರ ದೇವರೆಂದು ಭಾವಿಸೋಣ" ಎಂಬ ನಿಲುವು ತಾಳುತ್ತಾರೆ. ಪ್ರಪಂಚದಲ್ಲಿ ಸಾರ್ವತ್ರಿಕವಾದ ಚೇತನ ಶಕ್ತಿಯನ್ನು ಒಪ್ಪಿಕೊಳ್ಳೋಣ. ಆದರೆ ಅದನ್ನು 'ದೇವರು' ಎಂದು ಕರೆಯುವುದರಿಂದಲೇ ಅದು

ಮೂಢನಂಬಿಕೆಗಳಿಗೆ ಅನುವು ಮಾಡಿಕೊಡುತ್ತದೆ. ದೇವರು ಮಾತ್ರವಲ್ಲ ಆತ್ಮದಲ್ಲಿಯ ನಂಬಿಕೆಯೂ ಮೌಢ್ಯಕ್ಕೆ ಎಡೆಮಾಡಿಕೊಡುತ್ತದೆ. ಪ್ರಪಂಚದಲ್ಲಿಯಂತೆ ಮನುಷ್ಯ ಜೀವದಲ್ಲೂ ಚೇತನಶಕ್ತಿಯೊಂದಿದೆ. ಆದರೆ ಆ ಚೇತನಶಕ್ತಿಯು ಮಾನವ ದೇಹದಿಂದ ಹೊರತಾದುದಲ್ಲ. ದೇವರು ಮತ್ತು ಆತ್ಮ ಮನುಷ್ಯ ನಿರ್ಮಿತ ಕಲ್ಪನೆಗಳು ಮಾತ್ರ.

ದೇವರು – ಆತ್ಮ ನಂಬಿಕೆಗಳನ್ನು ಜೀವನದಿಂದ ಹೊರಗಿಡುವುದೆಂದರೆ ಮನುಷ್ಯನಲ್ಲಿ ವಿಕಾರ ಗರ್ವ, ಒಣ ಜಂಭ, ಸಂಕುಚಿತಾರ್ಥದ ವೈಚಾರಿಕತೆಗಳಿಗೆ ಎಡೆ ಮಾಡಿ ಕೊಡುವುದು ಎಂದಲ್ಲ. ಪ್ರಪಂಚದ ಪ್ರತಿಯೊಂದು ಜೀವಿ, ವಸ್ತುಗಳ ಬಗ್ಗೆ ವಿಸ್ಮಯತೆ ಹಾಗೂ ಅದ್ಭುತ ಪ್ರಜ್ಞೆ, ತನ್ನ ಮಿತಿಗಳ ಬಗ್ಗೆ ವಾಸ್ತವ ಅರಿವು ಮತ್ತು ತನ್ನ ಹಾಗೂ ಪ್ರಪಂಚದ ಚೇತನಶಕ್ತಿ ಬಗ್ಗೆ ಅಚಲ ವಿಶ್ವಾಸದ ಜೊತೆಗೆ ತನ್ನ ಹಾಗೂ ತನ್ನ ಸಮಾಜ ಮತ್ತು ಪರಿಸರದ ಬಗ್ಗೆ ಜವಾಬ್ದಾರಿ ಹೊಂದುವಿಕೆ ಇವು ಮನುಷ್ಯನು ತಾಳಬೇಕಾಗಿರುವ ಅರ್ಥಪೂರ್ಣ ನಿಲುವುಗಳು.

ಮೂಢನಂಬಿಕೆಗಳನ್ನು ಹೋಗಲಾಡಿಸಿ ಉದಾತ್ತ ಮೌಲ್ಯಗಳನ್ನು ಅಳವಡಿಸುವಲ್ಲಿ ಬುದ್ಧ, ಯೇಸು, ಬಸವ, ಮಾರ್ಕ್ಸ್, ಅಂಬೇಡ್ಕರ್ ಮುಂತಾದ ಮಹಾನ್ ವ್ಯಕ್ತಿಗಳು ನಮಗೆ ಆದರ್ಶವಾಗಿದ್ದಾರೆ. ಬುದ್ಧನು ತನ್ನ ಜ್ಞಾನೋದಯದ ನಂತರ ಪ್ರಚಾರಪಡಿಸಿದ 'ವಿಪಸ್ಸನ' ಮೂಢನಂಬಿಕೆಗಳನ್ನು ಗುರುತಿಸಿ ತೆಗೆದುಹಾಕುವಲ್ಲಿ ಅತ್ಯಂತ ಪರಿಣಾಮಕಾರಿ ಸಾಧನವಾಗಿದೆ. ಅದನ್ನೇ ಜೀವಿಕವು 'ಚೆನ್ನೋಟ' ಎಂದು ಕರೆದು ಅದರ ಅನುಷ್ಠಾನವನ್ನು ೬ ವರ್ಷ ಮೇಲ್ಪಟ್ಟವರೆಲ್ಲರೂ ತಮ್ಮ ಜೀವನದಲ್ಲಿ ಪ್ರತಿನಿತ್ಯ ಅಳವಡಿಸುವ ಅನಿವಾರ್ಯತೆ ಮತ್ತು ಅವಶ್ಯಕತೆಯನ್ನು ಮನಗಂಡಿದೆ. ಉಸಿರಾಟದ ಮೇಲಿನ ಕ್ರಮಬದ್ಧ ಗಮನದಿಂದ ಬೆಳೆಸುವ ಚೆನ್ನೋಟದಿಂದ ಮೂಢನಂಬಿಕೆಗಳ ಬೇರುಗಳನ್ನು ಕಿತ್ತು ಹಾಕಬಹುದು. ವೈಜ್ಞಾನಿಕವಾಗಿ ರೂಢಿಸುವ ಚೆನ್ನೋಟದಿಂದ ಬಾಹ್ಯ ಪ್ರಪಂಚದ ನಿಜ ಸ್ಥಿತಿಯನ್ನೂ ಅರ್ಥ ಮಾಡಿಕೊಳ್ಳಬಹುದು. ಚೆನ್ನೋಟದಿಂದ ನಮ್ಮಲ್ಲಿ ಬೆಳೆಯುವ ಎಚ್ಚರ ಮತ್ತುಅದರಿಂದ ಮೂಡುವ ಒಳ ಹಾಗೂ ಸಮಗ್ರ ದೃಷ್ಟಿಯು ನಮ್ಮನ್ನು ಸಕಲ ಬಂಧನಗಳಿಂದ ಪಾರು ಮಾಡುವುದು. ಬಂಧನ ಮುಕ್ತ ಜೀವನದ ಆವಿಷ್ಕಾರದಲ್ಲಿ ಚೆನ್ನೋಟದ ಮೂಲಕ ನಮ್ಮಲ್ಲಿಯ ಮೂಢನಂಬಿಕೆಗಳನ್ನು ಕಿತ್ತು ಹಾಕೋಣ. ಸಮಗ್ರ, ಸತ್ವಯುತ, ಸಮೃದ್ಧ, ಸುಖೀ ಮಾನವತಾ ಜೀವನವನ್ನು ಎಲ್ಲಾ ಮಾನವರೂ ಅನುಭವಿಸುವಂತಾಗಲಿ.

೬ ಡಿಸೆಂಬರ್ ೨೦೦೨

ಕಿರಣ ಕಮಲ ಪ್ರಸಾದ,

ನಾಗರಭಾವಿ, ಬೆಂಗಳೂರು.

ಅಂತರಂಗದ ಮಾತು

'ಭೀಕರ ಮೌಢ್ಯ' ಎಂಬ ಕಿರುಹೊತ್ತಿಗೆಯನ್ನು ತಾವು ಪ್ರವೇಶಿಸುವ ಮೊದಲು ಒಂದು ಮಾತನ್ನು ಸ್ಪಷ್ಟ ಪಡಿಸುತ್ತೇನೆ. ಇಲ್ಲಿ ಆಸ್ತಿಕವಾದ ನಾಸ್ತಿಕವಾದ ಮುಂತಾದ ಯಾವುದೇ ಪಂಥ ಸಿದ್ಧಾಂತಗಳಿಗೆ ಬದ್ಧನಾಗಿ ನಾನೀ ಪುಸ್ತಕ ಬರೆಯದೇ ಕೇವಲ ವೈಚಾರಿಕತೆಯ ತಳಹದಿ ಮೇಲೆ, ತಾರ್ಕಿಕ ದೃಷ್ಟಿಕೋನದಿಂದ ಅನೇಕ ಸಂದರ್ಭಗಳನ್ನು ಕಂಡು ತಕ್ಕ ಮಟ್ಟಿಗೆ ಅಧ್ಯಯನ ಮಾಡಿ, ನಮ್ಮ ಮುಗ್ಧ ಜನರನ್ನು ಮೂಢಾಚಾರಗಳಿಂದ ಹೊರತರುವ ಉದ್ದೇಶಕ್ಕಾಗಿ ಈ ಪ್ರಯತ್ನ ಮಾಡಿರುವೆನು. ಇದರಲ್ಲಿಯ ವಿಚಾರಗಳು ಕ್ರಮೇಣ ದೇವರ ಅಸ್ತಿತ್ವದ ಬಗೆಗೂ ತಿರುಗಬಹುದು. ಆ ವಿಷಯ ಇಲ್ಲಿ ಅಪ್ರಸ್ತುತವಾದರೂ ದೇವರ ಬಗ್ಗೆ ನನಗೆ ನಂಬಿಕೆ ಇದೆ. ದೇವರು ಎಂದರೆ ನಮ್ಮ ಶಿಲ್ಪ ಚಿತ್ರಗಳಲ್ಲಿರುವ ಆಕಾರದಂತೆ ಭಾವಿಸದೇ ಈ ಪ್ರಪಂಚದಲ್ಲಿ ಸಾರ್ವತ್ರಿಕವಾದ ಚೇತನಶಕ್ತಿಯೊಂದಿದೆ ಎನ್ನುವುದು ನಿರ್ವಿವಾದ. ಅದಕ್ಕೆ ಮಾತ್ರ ನಾವು ದೇವರೆಂದು ಭಾವಿಸೋಣ. ಈ ಕೃತಿ ಕುರಿತು ಬರುವ ಚರ್ಚೆ, ವಿಮರ್ಶೆ, ಟೀಕೆ, ಸಲಹೆಗಳಿಗೆ ಸ್ವಾಗತ ಕೋರುತ್ತ ಇದರ ಜನನಕ್ಕಾಗಿ ಸಹಾಯಕರಾದ ಸರ್ವರಿಗೂ ನನ್ನ ಅಭಾರ ಅರ್ಪಿಸುತ್ತೇನೆ.

೧೯೮೯

ಡಿ.ಎ.ಉಪಾಧ್ಯ,
ಅಟ್ಟೇಗೇರಿ,
ಮೈಸೂರು-೫೮೨೧೧೧

೧. ಭೀಕರ ಮೌಢ್ಯ

ಮನುಷ್ಯನ ಹುಟ್ಟಿನ ಜೊತೆಗೇ ಆಸೆ, ಅಸೂಯೆ, ಸ್ವಾರ್ಥ, ಸೇಡು, ಕಾವು, ರೋಗರುಜಿನಾದಿಗಳು ಜನನವಾಗಿವೆ. ಆತ ಈ ಎಲ್ಲಬಾಧೆಗಳಿಂದ ಮುಕ್ತನಾಗಲೂ ಹಾಗೂ ತನ್ನ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳಲು ಅನೇಕ ವಿಧವಾದ ಮಾರ್ಗಗಳನ್ನು ಅನುಸರಿಸುತ್ತಾನೆ. ಅವುಗಳಲ್ಲಿ ಅಂತ್ರ, ಮಂತ್ರ, ತಂತ್ರ, ತಾಯಿತಗಳಿಗೆ ಮೊರೆಹೋಗುವಿಕೆ: ಭಾನಮತಿ, ಮಾಟ, ಮದ್ದುಗಳ ಪ್ರಯೋಗ: ಭೂತ ಪ್ರೇತಗಳ ವಶೀಕರಣ, ದೇವರು ಗೃಹತಾರೆಗಳ ಆರಾಧನೆ: ಜ್ಯೋತಿಷ್ಯ ಭವಿಷ್ಯಗಳ ಅನುಕರಣೆ, ವಿಜ್ಞಾನ ವೈದ್ಯಕೀಯಗಳ ಉಪಯೋಗ ಮುಂತಾದುವುಗಳು ಪ್ರಧಾನವಾಗಿವೆ. ಇವುಗಳಲ್ಲಿ ಎಲ್ಲರೂ ಎಲ್ಲವನ್ನು ಅನುಸರಿಸುವವರಿಲ್ಲ. ಹಲವರಂತೂ ಯಾವುದಕ್ಕೆ ಯಾವ ಮಾರ್ಗ ಅನುಸರಿಸಬೇಕು ಎಂಬ ವೈಚಾರಿಕ ಪ್ರಜ್ಞೆ ಇಲ್ಲದೇ ಕೆಲವೊಬ್ಬ ಸ್ವಾರ್ಥ ಸಾಧಕರ ತಪ್ಪು ಮಾರ್ಗದರ್ಶನದಲ್ಲಿ ಸಾಗುತ್ತಿರುವುದರಿಂದ ನಮ್ಮ ಸಮಾಜದೊಳಗೆ ಅನೇಕ ಭೀಕರ ಮೌಢ್ಯಗಳು ತಾಂಡವ ನೃತ್ಯವಾಡುತ್ತಿವೆ.

ಪರೀಕ್ಷೆ ಪಾಸಾಗಬೇಕಾದರೆ ಕಷ್ಟಪಟ್ಟು ಓದದೆ ಸದಾವಕಾಲ ದೇವರನ್ನು ಧ್ಯಾನಿಸುತ್ತ ಕುಳಿತುಕೊಳ್ಳುವುದೆಷ್ಟು ಸಮಂಜಸ? ಅದೇ ರೀತಿ, ದೇಹಕ್ಕೆ ಕಾಯಿಲೆಯಾದರೆ ಪರಿಣಿತ ವೈದ್ಯರಲ್ಲಿ ತೋರಿಸಿಕೊಳ್ಳದೇ ಅಂತ್ರ, ಮಂತ್ರ, ತಂತ್ರ ತಾಯಿತಗಳಿಗೆ ಮೊರೆ ಹೋಗುವವರಿದ್ದಾರೆ. ಬೇರೆಯುವರ ಮೇಲಿನ ಸೇಡನ್ನು ತೀರಿಸಿಕೊಳ್ಳಲು ಮಾಟ, ಮದ್ದು, ಭಾನಮತಿ ಮುಂತಾದ ಹೀನ ಮೌಢ್ಯಮಾರ್ಗ ಅನುಸರಿಸುವ ಮುಟ್ಠಾಳರಿದ್ದಾರೆ. ಯಾವುದಾದರೂ ಊರಿಗೆ ಮುಖ್ಯವಾದ ಕೆಲಸದ ಮೇಲೆ ತುರ್ತಾಗಿ ಹೊರಟಾಗ ಭವಿಷ್ಯ, ಜೋತಿಷ್ಯಗಳ ಅನುಕರಣೆಯಲ್ಲಿ ರಾಹುಕಾಲ, ಗುಳಿಗೆಕಾಲ ಎಂದುಕೊಳ್ಳುತ್ತಾ ಹೋಗಬೇಕಾದ ಬಸ್ಸು, ರೈಲು, ವಿಮಾನಗಳನ್ನು ತಪ್ಪಿಸಿಕೊಂಡು ಆಗ ಬೇಕಾದ ಕೆಲಸವನ್ನು ತಾವೇ ಹಾಳು ಮಾಡಿಕೊಂಡಿರುವ ಮೂರ್ಖರಿದ್ದಾರೆ. ಮಳೆ ಬಂದಾಗ ತಿಥಿ ನೋಡಿ ಭೂಮಿಗೆ ಬೀಜ ಬಿತ್ತದೆ, ಒಳ್ಳೆಯ ನಕ್ಷತ್ರ, ವಾರ, ಎಂದು ಕಾಯ್ದು ಕುಳಿತು ಬರಬೇಕಾದ ಫಸಲನ್ನು ಎರವು ಮಾಡಿ ಕೊಳ್ಳೋ ತಿಳಿಗೇಡಿಗಳಿದ್ದಾರೆ.

ವಿವಾದಾಸ್ಪದವೆಂದಿರುವ ಈ ಮಾಟ, ಮದ್ದು, ಭವಿಷ್ಯ, ಜ್ಯೋತಿಷ್ಯ, ಮಂತ್ರ ತಂತ್ರಗಳ ಬಗ್ಗೆ ನಿಖರವಾಗಿ ಅಭಿಪ್ರಾಯ ಕೊಡುವವರ ಸಂಖ್ಯೆ ಬಹಳ ಕಡಿಮೆಯಾದರೂ ವಿಮರ್ಶನಾತ್ಮಕವಾಗಿ ಹಲವು ಸಂದರ್ಭ ಸನ್ನಿವೇಶಗಳನ್ನು ಎತ್ತಿಕೊಂಡು ವಿವೇಚಿಸಿ ನೋಡಿದರೆ ಇವುಗಳಲ್ಲಿ ನಿಜವಾಗಿಯೂ ಹುರುಳಿಲ್ಲವೆಂಬ ಅಭಿಪ್ರಾಯ ಸ್ಪಷ್ಟವಾಗಿ ತೋರುತ್ತದೆ. ಹಾಗೆ ತೋರಿದಾಗಲೂ ಹಲವು ಅನುಕರಣೀಯ ವ್ಯಕ್ತಿಗಳು ಅವುಗಳ

ಜೊತೆ ರಾಜಿಯಾಗಿ ಬದುಕುತ್ತಿರುವುದು, ನಮ್ಮ ಮುಗ್ಧ ಜನ ಬಲಿ ಪಶುವಾಗುವುದಕ್ಕೆ ಕಾರಣವಾಗಿದೆ.

೨. ಭವಿಷ್ಯ – ಜ್ಯೋತಿಷ್ಯ

ನಮ್ಮ ಜೀವನದಲ್ಲಿ ಮುಂದೆ ಆಗಲಿರುವುದನ್ನು ಹೇಳುವ ಸಾಮರ್ಥ್ಯ ಈ ಭವಿಷ್ಯ ಅಥವಾ ಜ್ಯೋತಿಷ್ಯಕ್ಕಿದೆ ಎನ್ನುತ್ತಾರೆ. ಹಾಗಿದ್ದಲ್ಲಿ ಒಂದೇ ಒಂದು ಸಾಧಾರಣವಾದ ಪ್ರಶ್ನೆಯನ್ನು ನಾವು ಈ ಜ್ಯೋತಿಷ್ಯಕ್ಕೆ ಸವಾಲಾಗಿ ಹಾಕೋಣ. ಅದಕ್ಕೆ ಉತ್ತರಿಸುವವರು ಭಾರತದಲ್ಲಿ ಅಷ್ಟೇ ಅಲ್ಲ, ವಿಶ್ವದಲ್ಲಿಯೇ ಯಾರಾದರೂ ಇದ್ದರೆ ಮುಂದೆ ಬರಲಿ, ನಮ್ಮ ಪ್ರಶ್ನೆ ಏನೆಂದರೆ, ಪ್ರತಿವಾರವೂ ನಮ್ಮ (ಸರಕಾರಿ) ಲಾಟ್ರಿಗಳ ಡ್ರಾ ನಡೆಯುತ್ತಲೇ ಇರುತ್ತವೆ, ಅವುಗಳಲ್ಲಿ ಬರಬಹುದಾದ ಬಂಪರ್ ಡ್ರಾ ಸಂಖ್ಯೆಯನ್ನು ಹೇಳುವ ಪಂಡಿತ ಭವಿಷ್ಯಗಾರ ಯಾರಾದರೂ ಇದ್ದಾರೆಯೇ?

ನಮ್ಮ ರಾಷ್ಟ್ರದ ಪ್ರಧಾನ ಮಂತ್ರಿಯಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರಿಗೆ ದೇಹದ ತುಂಬೆಲ್ಲ ಹಂತಕರು ಗುಂಡುಗಳನ್ನು ಹೊಡೆಯುವರೆಂಬ ಸಂಗತಿಯನ್ನು ಒಬ್ಬ ಭವಿಷ್ಯಗಾರನಾದರೂ ಏಕೆ ಬಾಯಿ ಬಿಡಲಿಲ್ಲ? ಜಗತ್ತಿಗೆ ಶಾಂತಿಧೂತನೆನಿಸಿದ ಮಹಾತ್ಮಾಗಾಂಧೀಜಿ ಕೂಡಾ ಅದೇರೀತಿ ಕೊಲೆಗಡುಕನ ಗುಂಡಿಗೆ ಬಲಿಯಾಗುವನೆಂಬ ಭೀಕರ ವಿಷಯವನ್ನು ಒಬ್ಬ ಭವಿಷ್ಯಗಾರನಾದರೂ ಏಕೆ ಮೊದಲೇ ಹೇಳಿಲ್ಲ? ನಿಜವಾಗಿ ಜ್ಯೋತಿಷ್ಯಕ್ಕೆ ಅಂಥ ಶಕ್ತಿ ಇದ್ದಿದ್ದರೆ ರಾಷ್ಟ್ರಪಿತನನ್ನು ಉಳಿಸಿಕೊಳ್ಳಲು ಸಾಧ್ಯತೆ ಇತ್ತಲ್ಲ? ನಮ್ಮ ದೇಶ ಆಗಾಗ ಒಂದಿಲ್ಲೊಂದು ಕಡೆ ಭೀಕರ ಬರಗಾಲ, ನೆರೆಹಾವಳಿ, ರೈಲು ಅಪಘಾತ, ಕಟ್ಟಡಗಳ ಕುಸಿತ, ರಾಸಾಯನಿಕಗಳ ಸೋರುವಿಕೆ ಮುಂತಾದ ದುರಂತಗಳಲ್ಲಿ ಪ್ರಾಣಹಾನಿ, ಆಸ್ತಿಪಾಸ್ತಿಗಳ ಹಾನಿಯನ್ನು ಎದುರಿಸುತ್ತ ನರಳುತ್ತಾ ಇದೆ. ಹಾಗಿದ್ದರೆ ಈ ಜ್ಯೋತಿಷ್ಯ ಇವುಗಳ ಮುನ್ಸೂಚನೆಯನ್ನು ಮೊದಲೇ ಏಕೆ ಹೇಳುತ್ತಿಲ್ಲ? ಮೊದಲೇ ಗೊತ್ತಾದರೆ ಈ ದೇಶದಲ್ಲೇ ಪರಿಹಾರವನ್ನು ಪೂರ್ವದಲ್ಲಿ ನಿಯೋಜಿಸಬಹುದಲ್ಲವೇ?

ನಮ್ಮ ಹಿಂದೂ ಸಂಸ್ಕೃತಿಯಲ್ಲಿ ಪ್ರತಿಯೊಂದು ಮದುವೆ ಮಾಡುವಾಗ ಈ ಜ್ಯೋತಿಷ್ಯ ಶಾಸ್ತ್ರಕಾರರ ಅಭಿಪ್ರಾಯ ಕೇಳಿಯೇ, ಅವರ ಒಪ್ಪಿಗೆ ದೊರೆತ ನಂತರವೇ ನೆಂಟಸ್ತಿಕೆ ಕುದುರಿಸುವ ಕಾರ್ಯ ಪ್ರಾರಂಭವಾಗುತ್ತದೆ. ಹಾಗಾದರೆ ಅನೇಕ ಬಾರಿ ಮದುವೆಯಾದ ದಿನವೇ ಮದುವೆಯ ಕಂಕಣ ಇನ್ನೂ ಕೈಯಲ್ಲಿರುವಾಗಲೇ ಅದೆಷ್ಟೋ ನಾರಿಯರು ವಿಧವೆಯರಾದ ಸಂದರ್ಭಗಳಿವೆ. ಹಾಗಿದ್ದರೆ ಜ್ಯೋತಿಷ್ಯ ಮಾಡಿದ ಕೆಲಸವೇನು? ಭವಿಷ್ಯ ಜ್ಯೋತಿಷ್ಯ ಸುಳ್ಳಲ್ಲ. ಈಗಿನ ಕಾಲದಲ್ಲಿ ಅವುಗಳನ್ನು ಸರಿಯಾಗಿ ಹೇಳುವವರಿಲ್ಲ

ಎಂದು ಹಲವರು ಗುನುಗುತ್ತಾರೆ. ಸರಿ ಹಿಂದಿನ ಕಾಲಕ್ಕೆ ಹೋಗೋಣ. ಆ ದಿನಗಳು ಭವಿಷ್ಯ ಊರ್ಜಿತಾವಾಸ್ಥೆಯಲ್ಲಿದ್ದ ದಿನಗಳೇ ಅಂದುಕೊಳ್ಳೋಣ .

ದ್ರೌಪದಿಯ ಸ್ವಯಂವರ ಹಾಗೂ ಮದುವೆ ಮಾಡುವಾಗ ಭವಿಷ್ಯಗಾರರು ಜ್ಯೋತಿಷ್ಯಗಾರರು ತುಂಬಾ ಪಂಡಿತರಿದ್ದರಲ್ಲವೇ? ಹಾಗಾದರೆ ಆಕೆ ಸ್ವಯಂವರದಲ್ಲಿ ಪಾಂಡವರನ್ನು ಮದುವೆಯಾಗಬೇಕಾಗುತ್ತದೆ ಎಂಬುದನ್ನು ಹಾಗೂ ಮದುವೆ ನಂತರ ತುಂಬಿದ ಸಭೆಯಲ್ಲಿ ಗಂಡಂದಿರ ಎದುರಿನಲ್ಲಿಯೇ ವಸ್ತ್ರಾಪಹರಣಕ್ಕೆ ಬಲಿಯಾಗಬೇಕಾಗುತ್ತದೆ ಎಂಬುದನ್ನು ಒಬ್ಬ ಜ್ಯೋತಿಷ್ಯಗಾರನಾದರೂ ಹೇಳಿ ಮದುವೆ ಅಥವಾ ಸ್ವಯಂವರವನ್ನು ಏಕೆ ತಪ್ಪಿಸಲಿಲ್ಲ? ಇದು ಬಿಡಿ. ಸೀತೆ ಶ್ರೀರಾಮಚಂದ್ರನನ್ನು ಮದುವೆಯಾದರೆ ಆಕೆ ಗಂಡನ ಜೊತೆ ವನವಾಸಕ್ಕೆ ಹೋಗಬೇಕಾಗುವುದೆಂಬುದನ್ನು, ನಂತರ ಅಲ್ಲಿ ರಾವಣನ ಬಂಧಿಯಾಗಿರಬೇಕಾದಿತೆಂಬುದನ್ನು, ಇಷ್ಟೆಲ್ಲ ಆದನಂತರ ಲೋಕಾಪವಾದದ ಮೇಲೆ ಗರ್ಭಿಣಿ ಹೆಂಗಸು ಗಂಡನಿಂದ ದೂರವಾಗಿ ಕಾಡಿಗೆ ಹೋಗಿ ಅನಾಥೆ ಆಗುವ ಪ್ರಸಂಗ ಬರುವುದೆಂಬುದನ್ನು ಒಬ್ಬ ಆಸ್ಥಾನ ಜ್ಯೋತಿಷ್ಯಗಾರನಾದರೂ ಏಕೆ ಹೇಳಲಿಲ್ಲ?

ಅನೇಕ ದೊಡ್ಡದೊಡ್ಡ ಸ್ವಾಮಿ ಸನ್ಯಾಸಿಗಳು ತಮ್ಮ ಮಠದ ಉತ್ತರಾಧಿಕಾರಿಯನ್ನು ಪಟ್ಟಕಟ್ಟಿ ತಾವು ಭಕ್ತ ಸೇವೆಯಿಂದ ವಿರಮಿಸುತ್ತಾರೆ. ಉತ್ತರಾಧಿಕಾರಿಯಾಗಿ ವಟುಗಳನ್ನು ಆರಿಸುವಾಗ, ಪಟ್ಟಾಭಿಷೇಕ ಮಾಡುವಾಗ ಅನೇಕ ಭವಿಷ್ಯಗಾರರ ಅಭಿಪ್ರಾಯಗಳನ್ನು ಅನುಸರಿಸುತ್ತಾರೆ. ಆದರೂ ಪಟ್ಟಕ್ಕೆ ಬಂದ ಪ್ರಾಯದ ಸ್ವಾಮೀಜಿ ದೊಡ್ಡ ಸ್ವಾಮೀಜಿಗಳು ಬದುಕಿರುವಾಗಲೇ ಅವರ ಮುಂದೆ ಕಾಲಾಧೀನರಾದ ನಿದರ್ಶನಗಳಿವೆ. ಅನೇಕ ಕಡೆ ಹಿರಿಯ ಸ್ವಾಮೀಜಿ ಉತ್ತರಾಧಿಕಾರಿಗಳಿಗೆ ಪಟ್ಟ ಕಟ್ಟದೇ ಇಹ ತ್ಯಜಿಸಿದ ಉದಾಹರಣೆಗಳಿವೆ. ಹಾಗಾದರೆ ಭವಿಷ್ಯ ಜ್ಯೋತಿಷ್ಯ ಮಾಡಿದ ಕೆಲಸವೇನು?

ಹಿಂದೆ ನಮ್ಮ ದೇಶದಲ್ಲಿ ಬಾಲ್ಯವಿವಾಹ ಪದ್ಧತಿ ಜಾರಿಯಲ್ಲಿದ್ದಾಗ ಅನೇಕ ಜನ ತಮ್ಮ ಮಗಳ ಹಾಗೂ ಅಳಿಯನಾಗುವವನ ಬಗ್ಗೆ ಭವಿಷ್ಯ ಕೇಳಿ ಜ್ಯೋತಿಷ್ಯಗಳ ಅಭಿಪ್ರಾಯದಂತೆ ಮದುವೆ ಮಾಡುತ್ತಿದ್ದರು. ಆದರೆ ಎಷ್ಟೋ ಕಂದಮ್ಮಗಳು ಋತುಮತಿಯಾಗುವ ಮೊದಲೇ ವಿಧವೆಯರಾದ ಕರಾಳ ಚರಿತ್ರೆ ನಮ್ಮಲ್ಲಿದೆ. ಆ ಬಾಲದಂಪತಿಗಳಲ್ಲಿ ಅನೇಕರು ದೊಡ್ಡವರಾದನಂತರ ಪರಸ್ಪರರ ಅಭಿರುಚಿ, ಹವ್ಯಾಸ, ನಡತೆ, ಮನೋಧರ್ಮ ಮುಂತಾದ ಹೊಂದಾಣಿಕೆಯಾಗದೇ ಬಹು ಸಂಖ್ಯಾತ ಸಂಸಾರಗಳು ಹಾಳಾಗುತ್ತಿದ್ದವು. ಅಂತೆಯೇ ಬಾಲ್ಯವಿವಾಹ ಪದ್ಧತಿಯನ್ನು ರದ್ದು ಮಾಡಬೇಕಾಯಿತು. ಇಲ್ಲಿ ಭವಿಷ್ಯಗಳ ಪಾಂಡಿತ್ಯ ಸುಳ್ಳೋ ಇಲ್ಲ ಜೋತಿಷ್ಯಶಾಸ್ತ್ರವೇ ಸುಳ್ಳೋ? ಯಾವುದು ಸುಳ್ಳು ಯಾವುದು ನಿಜ ಅದರ ತೀರ್ಮಾನ ನಮಗೆ ಬೇಡ. ಆದರೆ ಅದನ್ನು ನಾವು ಪ್ರಧಾನವಾಗಿ

ಅನುಸರಿಸುವುದರಿಂದ ಸದಾಕಾಲ ಅದರ ಅವಲಂಬಿಗಳಾಗಿ ವಿವೇಕದ ತಾರ್ಕಿಕ ಶಕ್ತಿಯನ್ನು ಕಳೆದುಕೊಂಡು ಆಗಬಹುದಾದ ಒಳಿತಿಗೆ ಬದಲಾಗಿ ಹಾನಿಯನ್ನು ಅನುಭವಿಸಬೇಕಾಗುತ್ತದೆ.

೩. ಅಂತ್ರ ಮಂತ್ರಗಳು

ಅಂತ್ರ, ಮಂತ್ರ, ತಂತ್ರ, ತಾಯಿತಗಳು ನಗರಕ್ಕಿಂತ ಹಳ್ಳಿಯಲ್ಲಿ ಭದ್ರವಾಗಿ ತಮ್ಮ ಸ್ಥಾನವನ್ನು ಇನ್ನೂ ಉಳಿಸಿಕೊಂಡಿವೆ. ಮೈಯಲ್ಲಿ ಆರಾಮು ಇಲ್ಲದಿದ್ದರೆ ಹೋಗಿ ಮಂತ್ರ ಹಾಕಿಸಿಕೊಂಡು ಬರುವುದು, ಅದಕ್ಕೂ ಕಾಯಿಲೆ ನಿಯಂತ್ರಣಕ್ಕೆ ಬರದಿದ್ದರೆ ಅಂತ್ರ ಕಟ್ಟಿಸಿಕೊಳ್ಳುವುದು, ಇನ್ನೂ ಭದ್ರವಾಗಿ ಶಾಶ್ವತ ವ್ಯವಸ್ಥೆ ಎಂದು ತಾಯಿತ ಕಟ್ಟಿಸಿಕೊಳ್ಳುವುದು, ಮುಂತಾದ ಭೀಕರ ಮೌಢ್ಯಗಳು ನಮ್ಮ ಮುಗ್ಧ ಮೂಢರಲ್ಲಿ ಬೇರೂರಿ ಅನೇಕ ಸಂಸಾರಗಳನ್ನೇ ಬಲಿ ತೆಗೆದುಕೊಳ್ಳುತ್ತಿವೆ.

ಕಾಯಿಲೆಗಳು ನಿಜವಾಗಿ ಅಂತ್ರ ಮಂತ್ರಗಳಿಗೆ ವಾಸಿಯಾಗುವ ಹಾಗಿದ್ದರೆ ವೈದ್ಯಕೀಯ ವಿದ್ಯಾಲಯ ಅಸ್ಪತ್ರೆಗಳೆಲ್ಲ ಏಕೆ ಬೇಕಿತ್ತು? ಸುಮಾರು ನಾಲ್ಕೈದು ವರ್ಷಗಳ ಹಿಂದೆ ಕರ್ನಾಟಕದಲ್ಲಿಯೇ ಒಬ್ಬ ವ್ಯಕ್ತಿ ಅಂತ್ರ, ಮಂತ್ರ, ಭಸ್ಮಗಳಿಂದಲೇ ಕ್ಯಾನ್ಸರ್, ಕುಷ್ಟ ರೋಗಗಳಂಥ ಭಯಾನಕ ಕಾಯಿಲೆಗಳನ್ನು ವಾಸಿ ಮಾಡುತ್ತೇನೆಂದು ತುಂಬಾ ಪ್ರತೀತಿಯಲ್ಲಿದ್ದ. ಅಲ್ಲಿಗೆ ಹೋಗಿಬಂದ ಅನೇಕ ಡಂಗುರ ಕೋರರಿಂದ ಆತನ ಸಾಮರ್ಥ್ಯವನ್ನು ಸಮರ್ಥಿಸುವ ಜನ ಬೆಳೆಯುತ್ತಾ ಹೋದಂತೆ ಆತ ಇನ್ನೂ ಸುದ್ದಿಯಲ್ಲಿ ಮೆರೆಯ ತೊಡಗಿದ. ಆ ಊರಿನಲ್ಲಿ ಜಾತ್ರೆಯಂತೆ ಪ್ರತಿದಿನ ರೋಗಿಗಳ ಜನಸಂದಣಿ ಸೇರತೊಡಗಿತು. ಅನೇಕ ಪಂಡಿತ ವೈದ್ಯರು, ವಿಜ್ಞಾನಿಗಳು, ವಿಚಾರವಾದಿಗಳು ನಮ್ಮ ಜನರ ಭೀಕರಮೌಢ್ಯಕ್ಕೆ ಬೆರಗಾದದ್ದೂ ಉಂಟು. ಇಂಥ ಸಂಧರ್ಭದಲ್ಲಿ ನಾನೂ ಅವರಿಗೊಂದು ಸವಾಲೂ ಹಾಕಿದೆ. “ ಮಾನ್ಯರೇ ನೀವು ಅಲ್ಲೊಬ್ಬ ಇಲ್ಲೊಬ್ಬ ರೋಗಿಗಳ ಕ್ಯಾನ್ಸರ್, ಕುಷ್ಟರೋಗ ಕಳೆದ ವದಂತಿ ಹರಡಿಕೊಂಡಿವೆ. ಆದರೆ ಅವರಿಗೆ ನಿಜವಾಗಿ ಅಂಥ ಕಾಯಿಲೆ ಇದ್ದವೋ ಇಲ್ಲವೋ ನನಗೆ ಗೊತ್ತಿಲ್ಲ. ಅಂತೂ ನಿಮ್ಮ ವಿಷಯ ಕೇಳಿ ಅಚ್ಚರಿಪಡುತ್ತಿರುವವರಲ್ಲಿ ನಾನೂ ಒಬ್ಬ. ನಿಮ್ಮಲ್ಲಿ ನಿಜವಾದ ಅಂಥ ಶಕ್ತಿ ಇದ್ದರೆ, ಈ ನಾಡಿನಲ್ಲಿರುವ ಪ್ರತಿಯೊಬ್ಬ ಕುಷ್ಟರೋಗಿಗಳನ್ನು, ಕ್ಯಾನ್ಸರ್ ರೋಗಿಗಳನ್ನು ನನ್ನ ಸ್ವಂತದ ಖರ್ಚಿನಲ್ಲಿ ನಿಮ್ಮ ಬಳಿ ಕರೆದುಕೊಂಡು ಬರುವೆ. ನೀವು ಅವರೆಲ್ಲರ ಕಾಯಿಲೆಯನ್ನುಸಂಪೂರ್ಣ ವಾಸಿಮಾಡಬೇಕು. ಅಂದರೆ ನಿಮ್ಮ ಮಂತ್ರ, ತಂತ್ರ, ಭಸ್ಮಗಳಿಗೆ ನಾನು ಮತ್ತು ಈ ದೇಶದ ವೈದ್ಯಕೀಯ ವಿಜ್ಞಾನ ಶಿರಬಾಗಿ ನಿಮ್ಮ ದಾಸರಾಗಬಹುದು. ಆಗ ಈ ದೇಶಕ್ಕೆ ಆಸ್ಪತ್ರೆ ವೈದ್ಯಕೀಯ ವಿದ್ಯಾಲಯಗಳನ್ನು ಬಾಗಿಲು ಹಾಕಿಸಬಹುದು. ಇದರಿಂದ ಆರ್ಥಿಕವಾಗಿಯೂ ಸರಕಾರಕ್ಕೆ, ಸಮಾಜಕ್ಕೆ ಹೇರಳವಾಗಿ ಲಾಭವಾಗುತ್ತದೆ. ಇಲ್ಲವಾದರೆ ನೀವು ಈ ನಿಮ್ಮಬೂಟಾಟಿಕೆಯ ಚಟುವಟಿಕೆಗಳನ್ನು ಕೂಡಲೇ ನಿಲ್ಲಿಸಿ

ನಿಮ್ಮ ಬಳಿ ಬರುವ ರೋಗಿಗಳಿಗೆ ವೈದ್ಯರ ಸಲಹೆ ಪಡೆಯುವಂತೆ ಸೂಚಿಸಬೇಕು" ಎಂದು ನಾನು ಬರೆದ ಪತ್ರಕ್ಕೆ ಅವರಿಂದ ಯಾವ ಉತ್ತರವೂ ಬರಲೇ ಇಲ್ಲ. ಅಲ್ಲಿಗೆ ಹೋಗುತ್ತಿದ್ದ ರೋಗಿಗಳಲ್ಲಿ ಅನೇಕರು ಸ್ಥಳದಲ್ಲಿಯೇ ಸತ್ತ ಕಾರಣ ಈ ಸಾವಿನ ಸಂಖ್ಯೆ ಹೆಚ್ಚುತ್ತಾ ಹೋಗಿದ್ದನ್ನು ಕಂಡು, ಸರಕಾರ ಆತನನ್ನು ಬಂಧಿಸಿದ್ದು ಸ್ಮರಣೀಯ. ಆತನ ಬಳಿಗೆ ಹೋಗಿಬಂದು ಅರೆಜೀವದಲ್ಲಿ ಉಳಿದಿರುವ ಮೂರ್ಖರು ಈಗ ಡಾಕ್ಟರ್ ಬಳಿ ಇನ್ನೂ ಚಿಕಿತ್ಸೆ ಪಡೆಯುತ್ತಲೇ ಇದ್ದಾರೆ. ಇನ್ನು ಹತ್ತಿಪ್ಪತ್ತು ವರ್ಷ ಬಾಳಿ ಬದುಕಬೇಕಾದ ಹಲವರು ಬೇಗ ಡಾಕ್ಟರ್ ಬಳಿ ಬರದೇ ಇದ್ದುದರಿಂದ ಕಾಯಿಲೆ ಮೃತ್ಯುವಿನ ದಡದತ್ತ ಕರೆದೊಯ್ದು ಕಾರಣ ಡಾಕ್ಟರ್ ಕೂಡಾ ಏನೂ ಮಾಡಲಾಗದೇ ಕೊನೆಗಳಿಗೆಗಳನ್ನು ಎಣಿಸುತ್ತಿದ್ದಾರೆ. ಈ ಮಂತ್ರ ಅಂತ್ರಗಳನ್ನು ನಂಬಿದ ಮೂರ್ಖತನಕ್ಕಾಗಿ.

ನಮ್ಮಲ್ಲಿ ಇಂಥ ಅಂತ್ರ ಮಂತ್ರದ ವ್ಯಕ್ತಿಗಳು ಈಗಲೂ ಅಲ್ಲಲ್ಲಿ ಕಾಣಸಿಗುತ್ತಾರೆ. ಅವರೆಲ್ಲ ನಮ್ಮ ಮುಗ್ಧ ಮೂರ್ಖರ ದೃಷ್ಟಿಯಲ್ಲಿ ಪವಾಡ ಪುರುಷರಾಗಿಯೇ ಸ್ಥಾನಗಿಟ್ಟಿಸಿ ಕೊಂಡಿದ್ದಾರೆ. ಆದರೆ ಅಲ್ಲಿಯ ನಿಜವಾದ ಪವಾಡ ಪುರುಷರನ್ನೇ ನಮ್ಮ ಜನ ಮರೆತ್ತಿದ್ದಾರೆ. ಭಯಾನಕ ಕಾಯಿಲೆಯಾಗಿದ್ದ ಪೈಲಿ ಬೇನೆಗೆ ಒಬ್ಬ ಮಹಾ ಪುರುಷ ವ್ಯಾಕ್ಸಿನೇಷನ್ ಎಂಬ ಒಂದು ಚುಚ್ಚು ಮದ್ದು ಕಂಡುಹಿಡಿದ ಅದನ್ನು ಚಿಕ್ಕ ವಯಸ್ಸಿನಲ್ಲಿ ಒಂದು ಬಾರಿ ಮಕ್ಕಳಿಗೆ ಹಾಕಿದರೆ ಸಾಕು, ಆ ರೋಗ ಆತನ ಜೀವನದುದ್ದಕ್ಕೂ ಹತ್ತಿರಸುಳಿಯಲಾರದು. ಅದೇರೀತಿ ಟ್ರಿಪಲ್ ಎಂಟಿಜೆನ್ ಎಂಬ ಒಂದು ಚುಚ್ಚು ಮದ್ದನ್ನು ಒಬ್ಬ ಡಾಕ್ಟರ್ ಮಹಾಶಯ ಶೋಧಿಸಿದ. ಅದನ್ನು ಸಹ ಮಗುವಿಗೆ ಒಮ್ಮೆ ಹಾಕಿದರೆ ಸಾಕು ಆ ಮಗುವಿಗೆ ಡಿಫ್ತಿರಿಯಾ, ಟೈಫಾಯ್ಡ್ ಊಫಿಂಗ್ ಕಾಫ್ ಬರುವುದಿಲ್ಲ. ಅದೇರೀತಿ ಪೋಲಿಯೋ ಡ್ರಾಪ್ಸ್ ಕೂಡಾ ಅದನ್ನು ಮಕ್ಕಳಿಗೆ ಒಂದು ಕೋರ್ಸ್ ಹಾಕಿದರೆ ಸಾಕು. ಆಜನ್ಮ ಪರ್ಯಂತ ಪೋಲಿಯೋ ರೋಗ ಅವರಿಗೆ ಬರುವುದಿಲ್ಲ.

ಈ ಔಷಧಿಗಳನ್ನು ಕಂಡು ಹಿಡಿದು ಅವರು ಮಹಾ ಪವಾಡವನ್ನೇ ಮಾಡಿದ್ದಾರೆ. ಹಾಗೆ ಮಂತ್ರ ಅಂತ್ರಗಳಿಂದ ಯಾವುದಾದರೂ ರೋಗವನ್ನು ಶಾಶ್ವತವಾಗಿ ನಿವಾರಿಸಲು ಸಾಧ್ಯವಿದೆಯೇ? ಇದುವರೆಪಿಗೂ ಯಾವ ಮಂತ್ರವಾದಿಯಾದರೂ ಹಾಗೇನಾದರೂ ಲೋಕಹಿತ ಮಾಡಿದವರಿದ್ದಾರೆಯೇ?

ನಮ್ಮ ಡಾಕ್ಟರುಗಳು ಹಗಲು ರಾತ್ರಿ ಎನ್ನದೇ ರೋಗಿಯ ಪರಿಶೀಲನೆ, ಆತನ ರಕ್ತ, ಕಫ, ಮಲ, ಮೂತ್ರ ಮುಂತಾದವುಗಳನ್ನು ಪರೀಕ್ಷಿಸಿ ಶರೀರದ ಒಳ ಹೊರಗಿನ ದೃಶ್ಯಗಳ ಕ್ಷ-ಕಿರಣ ತೆಗೆದು ಅವೆಲ್ಲವುಗಳ ಜೊತೆ ಪ್ರಯೋಗಾಲಯದಲ್ಲಿ ಸಂಶೋಧನೆ ಮಾಡುತ್ತ ಈ ಭಯಾನಕ ಕಾಯಿಲೆಗಳಿಗೆಲ್ಲ ನಿವಾರಣೋಪಾಯ ಹಾಗೂ ಔಷಧಿಗಳನ್ನು ಕಂಡುಹಿಡಿಯಲು ಅವ್ಯಾಹಿತ ಶ್ರಮಿಸುತ್ತ ಪ್ರಯೊಗಗಳಲ್ಲಿ ರೋಗಿಗಳ ಜೊತೆ ತಮ್ಮ ಜೀವನವನ್ನೇ ತೇಯುತ್ತಿದ್ದಾರೆ. ಹೀಗಿದ್ದರೂ ಹಲವು ಭಯಾನಕ ರೋಗಿಗಳಿಗೆ ಇನ್ನೂ

ಸರಿಯಾದ ಔಷಧಿ ಸಿಗದಿರುವಾಗ ಯಾವುನೋ ಒಬ್ಬ ವೇಷಗಾರ ರೋಗಿಯ ಮುಖಕ್ಕೆ ತನ್ನ ಎಂಜಲು ಗಾಳಿಯನ್ನು ಉಸುರಿ ತಾಮ್ರದ ತಗಡನ್ನು ಕರಿದಾರದಲ್ಲಿ ಕಟ್ಟಿದ ಮಾತ್ರಕ್ಕೆ ಸರ್ವ ರೋಗಗಳೂ ಶಮನವಾಗುತ್ತವೆಂಬುದು ಎಷ್ಟು ಹಾಸ್ಯಾಸ್ಪದ!

ಕೆಲವು ದಿನಗಳ ಹಿಂದೆ ಮಂತ್ರ ನಿಪುಣರೊಬ್ಬರು ತರ್ಜನ್ಯ ಜಪಮಾಡಿ ಮಂತ್ರದಿಂದ ಮಳೆ ತರಿಸುವುದಾಗಿ ಪ್ರಯತ್ನಿಸಿ ನಗೆಪಾಟಲಿಗೀಡಾದ ಪ್ರಸಂಗ ಇಡೀ ದೇಶಕ್ಕೆ ಹಾಸ್ಯಾಸ್ಪದವಾಯಿತು. ಮಂತ್ರದಿಂದ ಮಳೆ ಬರಿಸುವ ಹಾಗಿದ್ದರೆ ಆದಿಕಾಲದಿಂದಲೂ ಅನಾವೃಷ್ಟಿಯನ್ನು ಅನುಭವಿಸುತ್ತ ಆಪತ್ತನ್ನೆದುರಿಸಬೇಕಾಗಿರಲಿಲ್ಲ.

ಇಲ್ಲಿ ಅಂತ್ರ ಮಂತ್ರಗಳ ಸಾಮರ್ಥ್ಯ ಆ ಪಂಡಿತರ ಯೋಗ್ಯತೆಗಳನ್ನು ಅಳೆಯುವುದಕ್ಕಿಂತ ನಮ್ಮ ಜನರಲ್ಲಿರುವ ಭೀಕರ ಮೌಢ್ಯವನ್ನು ಎತ್ತಿ ತೋರಿಸುತ್ತದೆ.

೪. ಮಾಟ ಮಾಡುವುದು

ಮಾಟದಲ್ಲಿ ಅನೇಕ ಪ್ರಕಾರಗಳಿವೆ. ವ್ಯಕ್ತಿಗೆ ಏನಾದರೂ ಅನಿಷ್ಟ ಅಥವಾ ಕಾಯಿಲೆ ಅಂಟಿದರೆ ಅದನ್ನು ಹೋಗಲಾಡಿಸಲು ಮಾಟದ ಮೊರೆಹೋಗುವವರಿದ್ದಾರೆ. ತಮಗಾದ ಕಾಯಿಲೆ ಬೇರೆಯವರಿಗೆ ಹೋಗಲೆಂದು ಆಶಿಸಿ, ಹಿಟ್ಟಿನ ಗೊಂಬೆಯನ್ನು ಮಾಡಿ ಅದನ್ನು ಮಣ್ಣಿನತಟ್ಟೆಯಲ್ಲಿ ಇರಿಸಿ, ಅದಕ್ಕೆ ಕುಂಕುಮ ಅರಿಶಿನ ಇನ್ನೂ ಏನೇನೋ ವಿಧಿಯಂತೆ ಹಚ್ಚಿ ಅದರ ಜೊತೆ ನಿವಾಳಿಸಿದ ನಿಂಬೇಹಣ್ಣು, ಗೇರು, ಮೆಣಸಿನಕಾಯಿ, ಕಾರೀಕ ಮುಳ್ಳು, ಎಲೆ ಅಡಿಕೆ, ಬಿಡಿಕಾಸು ಇನ್ನು ಏನೇನೋ ಇರಿಸುತ್ತಾರೆ. ಇದೆಲ್ಲ ಇರಿಸಿದ ತಟ್ಟೆಯನ್ನು ಮೂರು ದಾರಿ ಸಂಧಿಸುವ ಸ್ಥಳದಲ್ಲಿಟ್ಟು ಬರುತ್ತಾರೆ, ಈ ಬೊಂಬೆ ದಾಟಿಹೋದವರಿಗೆ ಇಲ್ಲವೇ ಮುಟ್ಟಿದವರಿಗೆ ಅಲ್ಲಿ ಮಾಟ ಮಾಡಿದ ಆ ಕಾಯಿಲೆ ಇವರಿಗೆ ಅಂಟುತ್ತದೆಯಂತೆ. ಈ ಉದ್ದೇಶದಲ್ಲಿ ಎಂಥ ಮೂರ್ಖ ಹಾಗೂ ಮೂಢತನ ಅಡಕವಾಗಿದೆ! ನಿಮ್ಮ ಕಾಯಿಲೆಯನ್ನು ವಾಸಿ ಮಾಡಿಕೊಳ್ಳುವುದೇನೋ ನ್ಯಾಯ ಸಮ್ಮತ. ಆದರೆ ಅದು ಇನ್ನೊಬ್ಬರಿಗೆ ತಗುಲಿ ಅವರು ನಿಮ್ಮ ಭಾದೆ ಪಡುವಾಗ ನೀವು ಹಾಯಾಗಿರಬೇಕೆಂದರೆ ಇದಕ್ಕಿಂತ ಹೀನ ಸೂತ್ರ ಮತ್ತೊಂದಿಯೇ? ಒಬ್ಬರ ಕಾಯಿಲೆ ಇನ್ನೊಬ್ಬರಿಗೆ ತಗಲದಿರಲೆಂದು ಡಾಕ್ಟರ್‌ಗಳು, ಸರಕಾರ ಜಾಗ್ರತೆ ವಹಿಸುವಾಗ ಇಲ್ಲಿ ಅದರ ವಿರುದ್ಧ ದಿಕ್ಕಿನ ಸೆಣಸಾಟ? ಹೋಗಲಿ ಈ ನಂಬಿಕೆಯಲ್ಲಿ ಸತ್ಯಾಂಶವಾದರೂ ಇದೆಯೇ? ಇಲ್ಲಿ ನನ್ನ ಜೀವನದ ಒಂದು ಅನುಭವವನ್ನು ಹೇಳಬೇಕಾಗಿದೆ. ನಾನು ಹಳ್ಳಿಯಲ್ಲಿ ಶಾಲೆಗೆ ಹೋಗುತ್ತಿದ್ದ ದಿನಗಳಂದು, ಪ್ರತಿದಿನವೂ ಇಂಥ ಒಂದಿಲ್ಲೊಂದು ಸನ್ನಿವೇಶ ಕಣ್ಣಿಗೆ ಬೀಳುತ್ತಿದ್ದವು. ಅದನ್ನು ಕಂಡು ಖುಷಿಯಾಗುತ್ತಿದ್ದ ನಾನು ರಾಷ್ಟ್ರೀಯ ಹಾನಿ ಎಂದು ಅಲ್ಲಿದ್ದ ಚಿಲ್ಲರೆ ಕಾಸುಗಳನ್ನು ಜೇಬಿಗೇರಿಸಿ ಹಿಟ್ಟಿನಬೊಂಬೆ ಮುಂತಾದ ತಿನ್ನುವ ವಸ್ತುವನ್ನು ಸಮೀಪದಲ್ಲಿದ್ದ ದನಕರುಗಳ ಬಾಯಿಗೇರಿಸಿ ಶಾಲೆಯತ್ತ ಸಾಗುತ್ತಿದ್ದೆ. ಈ ವಿಷಯ ತಿಳಿದ ನನ್ನ ತಾಯಿ ನಾನು ಬಂದಾಕ್ಷಣ ನನ್ನನ್ನು ಮನೆಯ

ಹೊರೆಗೇ ನಿಲ್ಲಿಸಿ ತಲೆ ಮೇಲೊಂದು ಬಿಂದಿಗೆ ನೀರು ಸುರಿದು ಏನೇನೋ ಶಾಸ್ತ್ರ ಮಾಡಿ ಮನೆಯೊಳಗೆ ಸೇರಿಸಿ ಕೊಳ್ಳುತ್ತಿದ್ದಳು. ಆದರೆ ನನ್ನ ತಾಯಿಗೆ ಯಾರಿಂದಲೂ ವಿಷಯ ತಿಳಿಯದ ದಿನಗಳಲ್ಲಿ ಅನೇಕ ಬಾರಿ ನಾನು ನೇರವಾಗಿ ಮನೆಯೊಳಗೆ ಪ್ರವೇಶ ಮಾಡುತ್ತಿದ್ದೆ. ಆದುದರಿಂದ ಒಂದು ದಿನವೂ ನನಗೆ ಯಾವುದೇ ಕಾಯಿಲೆ, ಪೀಡೆ ಅಂಟಲೇ ಇಲ್ಲ. ಪ್ರತಿದಿನವೂ ರೋಗಿಯ ಸೇವೆಯಲ್ಲಿಯೇ ಇದ್ದು ಆಯುಷ್ಯದುದ್ದಕ್ಕೂ ಅವರ ಬಳಿಯೇ ಶ್ರಮಿಸುವ ಡಾಕ್ಟರುಗಳು, ದಾದಿಯರು ಆರೋಗ್ಯದಿಂದಿರುವಾಗ ಎಂದಾದರೊಂದು ದಿನ ಇಂಥ ಹಿಟ್ಟಿನ ಬೊಂಬೆ ಇಟ್ಟ ಮಾಟದ ತಟ್ಟೆ ಬಳಿ ಹೋದರೆ ಆ ಕಾಯಿಲೆ ಇವರಿಗೆ ತಗುಲುತ್ತದೆ ಎಂಬುದು ಹುಚ್ಚರೂ ಹಾಸ್ಯ ಮಾಡುವ ಮಾತಲ್ಲವೇ? ಇಲ್ಲಿಯ ನಮ್ಮ ಜನರ ಮೌಢ್ಯದ ಬಗ್ಗೆ ಖೇದಪಡಬೇಕಾಗುತ್ತದೆ.

ಮನೆಯಲ್ಲಿ ಜಗಳ ಆರಂಭವಾದರೆ ಅಥವಾ ಪದೇ ಪದೇ ದನಕರುಗಳು ಸಾಯುವುದು ನಡೆದರೆ, ಗದ್ದೆ ಹೊಲಗಳಲ್ಲಿ ಬೆಳೆ ಸರಿಯಾಗಿ ಬಾರದಿದ್ದರೆ, ಹಾಗೂ ಸದಾ ಆರ್ಥಿಕ ಮುಗ್ಗಟ್ಟು ಬಂದರೆ ತಮ್ಮ ಮನೆಗೆ ಯಾರೋ ಮಾಟ ಮಾಡಿಸಿದ್ದಾರೆಂದು ಅದಕ್ಕೆ ವಿರುದ್ಧವಾಗಿ ನಿಯಂತ್ರಣ ಮಾಡಿಸಲು ಮಾಟಗಾರರನ್ನು ಅರಸುತ್ತ ಹೋಗುತ್ತಾರೆ. ಮೊದಲೇ ದಾಳಿ ಮಾಡಿದ ಬಡತನದಲ್ಲಿ ಸಾಲ ಮಾಡಿ ಇನ್ನೂ ದರಿದ್ರರಾಗುತ್ತಾರೆ. ಮನೆಯಲ್ಲಿ ಒಬ್ಬರಿಗೊಬ್ಬರು ತಮ್ಮ ಛಲವನ್ನೇ ಸಾಧಿಸಲು ಮುಂದಾದಾಗ ಜಗಳ ಬರುವುದು ಸಹಜ. ಅದರಲ್ಲೂ ಹಣದ ಮುಗ್ಗಟ್ಟಿದ್ದಾಗ ಎಲ್ಲರ ಮನದಲ್ಲೂ ನಿರಾಶೆ, ಅಶಾಂತಿ ರಾಜ್ಯವಾಳುತ್ತಿರುತ್ತವೆ. ಹೀಗಿದಾಗ ಸಣ್ಣ ಸಣ್ಣ ವಿಷಯಕ್ಕೂ ಕದನ ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಅದನ್ನು ಎಲ್ಲರೂ ಸಮಾಧಾನ, ತಾಳ್ಮೆಯಲ್ಲಿ ವಿಚಾರ ವಿನಿಮಯದೊಂದಿಗೆ ಬಗೆಹರಿಸಿಕೊಳ್ಳದೇ, ಯಾರೋ ಆಗದವರು ನಮ್ಮ ಮನೆಗೆ ಮಾಟ ಮಾಡಿಸಿದ್ದಾರೆ ಎಂದು ಭಾವಿಸುವುದು ನಮ್ಮ ಮೌಢ್ಯದ ದ್ಯೋತಕವೇ ಸರಿ. ಮಾಟದಿಂದ ಒಬ್ಬರಿಗೊಬ್ಬರು ಜಗಳವಾಡುವ ಸಾಧ್ಯತೆ ಇದ್ದರೆ, ವಿರೋಧ ಪಕ್ಷದವರ ಸರಕಾರಕ್ಕೆ ಹಾಗೂ ಪಕ್ಷಕ್ಕೆ ದಿನವೂ ಮಾಟ ಮಾಡಿಸಿ ಅವರವರಲ್ಲಿಯೇ ಜಗಳ ಹಚ್ಚುತ್ತಿದ್ದರಲ್ಲವೇ?

ಮನುಷ್ಯರಂತೆ ದನಕರುಗಳೂ ಹುಟ್ಟುವುದು, ಸಾಯುವುದು ಸಹಜ. ಆದರೆ ಆ ಸಾವುಗಳ ಬಗ್ಗೆ ವೈಚಾರಿಕವಾಗಿ ವೈಜ್ಞಾನಿಕ ಕಾರಣ ಹುಡುಕಿ ಇನ್ನೊಂದು ಬಾರಿ ಹಾಗಾಗದಂತೆ ತಜ್ಞ ವೈದ್ಯರ ಸಲಹೆ ಪಡೆಯುವುದು ಅವಶ್ಯಕವಿದೆ. ಅದನ್ನು ಮರೆತು ನಮ್ಮ ಮನೆಗೆ ಯಾರೋ ಆಗದವರು ಮಾಟ ಮಾಡಿಸಿದ್ದಾರೆ ಎಂದು ಮತ್ತೊಬ್ಬ ಮಾಟಗಾರನ ಬಳಿ ಅದಕ್ಕೆ ಪರಿಹಾರೋಪಾಯ ಹುಡುಕುವುದು ಮೂರ್ಖತನದ ಪರಮಾವಧಿ. ಕೇವಲ ಮಾಟ ಮಂತ್ರಗಳಿಂದ ಪ್ರಾಣಿಗಳು ಸಾಯುವ ಹಾಗಿದ್ದರೆ ಕಾಡುಮೃಗಗಳಿಂದ ರಕ್ಷಣೆ ಪಡೆಯಲು ಕೋವಿ, ಕಠಾರಿ ಹಿಡಿದು ಬೇಟೆಗೆ ಹೋಗುವ ಅವಶ್ಯಕತೆಯೇ ಇರಲಿಲ್ಲ. ಅಲ್ಲದೇ ಮೃಗಗಳ ಅವಯವಗಳನ್ನು ವಿದೇಶಕ್ಕೆ ರಫ್ತು ಮಾಡುವ ಘಾತುಕ ವ್ಯಕ್ತಿಗಳಿಂದ

ಕಾಡುಗಳು ಬರಿದಾಗಿ ಯಾವುದೇ ಪ್ರಾಣಿಯ ಚಿತ್ರ ಸಹ ನಮಗೆ ನೋಡಲು ಸಿಗುವುದು ಸಾಧ್ಯವಿರುತ್ತಿರಲಿಲ್ಲ.

ಹೊಲಗದ್ದೆಗಳಲ್ಲಿ ಸರಿಯಾಗಿ ಫಸಲು ಬರದೇ ಹೋದರೆ ನಮಗಾಗದವರು ಮಾಟ ಮಾಡಿಸಿದ್ದಾರೆ ಎಂದು ಭಾವಿಸುತ್ತಾರೆ. ಅದಕ್ಕೆ ತಿರುಗುಮಾಟ ಮಾಡಿಸುವುದು ತುಂಬಾ ಮೌಢ್ಯಚಾರವಾಗಿದೆ. ಹಾಗೆ ಮಾಟ ಮಾಡುವ ಮೂರ್ಖರಿದ್ದಿರಬಹುದು. ಆದರೆ ಅದರಿಂದ ಪೀಡೆಗಳ ಮೇಲೆ ಯಾವುದೇ ಪರಿಣಾಮ ಆಗುವುದು ಸಾಧ್ಯವಿಲ್ಲ. ಅಂಥ ಮಾಟದ ಎಲ್ಲ ಪದಾರ್ಥಗಳನ್ನು ನುಂಗಿ ಜೀರ್ಣಿಸುವ ಶಕ್ತಿ ನಮ್ಮ ಭೂಮಿಗಿದೆ. ಮಾಟಗಾರ ಉಪಯೋಗಿಸುವ ಸಕಲ ಸರಂಜಾಮು ಪದಾರ್ಥಗಳು ಆ ಭೂಮಿಯಿಂದಲೇ ಬಂದಂತಹವುಗಳು. ಅವುಗಳನ್ನು ಮತ್ತೆ ಭೂಮಿಯಲ್ಲಿ ಹೂತರೆ ಭೂಮಿ ಬೆಳೆಯಿಲ್ಲದೇ ಬಂಜೆಯಾಗುವುದೆಂಬುದು ಅಸಾಧ್ಯವಾದ ಸುಳ್ಳು. ನಿಮ್ಮ ಹೊಲಗದ್ದೆಗಳ ಬೆಳೆ ಸರಿಯಾಗಿ ಬಾರದಿರುವುದಕ್ಕೆ ಅನೇಕ ಕಾರಣಗಳಿದ್ದರಬಹುದು. ಅಂತಹವುಗಳನ್ನು ನಿಮ್ಮ ಹತ್ತಿರದ ಕೃಷಿ ತಜ್ಞರಲ್ಲಿ ಚರ್ಚಿಸಿ ತಿಳಿದುಕೊಳ್ಳುವುದು ಆವಶ್ಯಕವಿದೆ. ಮಾಟದಲ್ಲಿ ಸರಿಯಾಗಿ ಅಂತಸತ್ವ ಇದ್ದಿದ್ದರೆ ಪ್ರತಿವರ್ಷವೂ ದೇಶದ ಅರ್ಧಕ್ಕರ್ಧ ಹೊಲಗದ್ದೆಗಳು ಬರುಡು ಬೀಳುತ್ತಿದ್ದವು. ಅಷ್ಟೇ ಅಲ್ಲ ಕಳ್ಳ ಕಾಕರಿಂದಲೇ ಈ ಮಾಟಗಾರರ ವಧೆಯಾಗುತ್ತಿದ್ದವು. ಹಲವು ರಾಷ್ಟ್ರಗಳು ಅಣುಬಾಂಬು ವಿಜ್ಞಾನದ ಶಿಕ್ಷಣ ಆರಂಭಿಸಿದಂತೆ ಈ ಮಾಟ ಮಾಡುವ ವಿದ್ಯಾಲಯಗಳನ್ನು ಆರಂಭಿಸುವ ಸಾಧ್ಯತೆ ಇತ್ತಲ್ಲವೇ?

ಆರ್ಥಿಕ ಮುಗ್ಗಟ್ಟು ಅಂದರೆ ಅಡಚಣಿ. ಅದು ಎಂಥವರನ್ನು ಬಿಟ್ಟಿಲ್ಲ. ಅದು ಬೇರೆಯವರ ಮಾಟ ಮಾಡಿಸುವುದರಿಂದ ಬರುವುದೇ ನಿಜವಾಗಿದ್ದರೆ ಇವೊತ್ತು ದೇಶದಲ್ಲಿ ಟಾಟಾ, ಬಿರ್ಲಾ, ದಾಲ್ಮಿಯಾರಂಥ ಶ್ರೀಮಾನ್ ಶ್ರೀಮಂತರ ಹೆಸರುಗಳೇ ಇರುತ್ತಿರಲಿಲ್ಲ. ಅದಕ್ಕೆ ತಿರುಗಿ ಮಾಟದ ರೂಪದಲ್ಲಿ ನಿಯಂತ್ರಣವಿದ್ದುದಾದರೆ ನಮ್ಮ ದೇಶವನ್ನು ಸಾಲದಲ್ಲಿ ಗಿರವಿ ಮಡಗುವ ಅವಶ್ಯಕತೆಯೇ ಇರಲಿಲ್ಲ. ಇವೆಲ್ಲಾ ಮೂರ್ಖರು, ಹಲವು ಸ್ವಾರ್ಥ ಸಾಧಕರು ತಮ್ಮ ಲಾಭಕ್ಕಾಗಿ ಮುಗ್ಧ ಜನರನ್ನು ನಂಬಿಸಿ ಮರಳು ಮಾಡಿದ ಮೂಢನಂಬಿಕೆಗಳು, ಇಂಥ ಯಾವುದೇ ಮಾಟಕ್ಕೆ ತಲೆ ಕೆಡಸಿಕೊಳ್ಳದೇ ನಿಮ್ಮ ಸಮಸ್ಯೆಗಳಿಗೆ ಲೌಕಿಕವಾಗಿ ನಿವಾರಣೋಪಾಯ ಕಂಡುಕೊಳ್ಳುವುದು ಆವಶ್ಯಕವಿದೆ.

೫. ಮದ್ದು ಹಾಕುವುದು

ಮದ್ದು ಹಾಕುವ ಈ ಭೀಕರವಾದ ಮೌಢ್ಯದಿಂದ ಅನೇಕ ಅನಾಹುತಗಳು ಸಂಭವಿಸಿದ ಸನ್ನಿವೇಶಗಳಿವೆ! ವ್ಯಕ್ತಿಯ ಊಟ ತಿಂಡಿಯಲ್ಲಿ ಬೆರೆಸಿಕೊಡುವ ಈ ಮದ್ದು ಎಂಬ ಪದಾರ್ಥ ಗಿಡ ಮೂಲಿಕೆಯೋ ಅಥವಾ ರಾಸಾಯನಿಕವೋ ಆಗಿರುತ್ತದೆ. ಇದು ನಿರ್ದಿಷ್ಟವಾದ ಬಯಕೆಯಂತೆ ಕೆಲಸ ಮಾಡುತ್ತದೆ ಎಂಬುದು ಹಾಕಲು ಸಲಹೆ ಮಾಡುವವರ

ಉಪದೇಶವಾಗಿರುತ್ತದೆ. ಆದರೆ ಬಹಳಷ್ಟು ಪ್ರಸಂಗದಲ್ಲಿ ಇದು ತದ್ವಿರುದ್ಧವಾಗಿ ಕೆಲಸ ಮಾಡಿದ ಘಟನೆಗಳೇ ಎಲ್ಲಡೆ ಸಂಭವಿಸಿವೆ. ಗಂಡ ಹೆಂಡಿರ ನಡುವೆ ಹೊಂದಾಣಿಕೆಗೆ ಅನ್ಯೋನ್ಯತೆ ಇಲ್ಲದಾಗ ಹೆಂಡತಿ ತನ್ನ ಗಂಡ ಸದಾಕಾಲ ತನ್ನ ಆಣತಿಯಂತೆಯೇ ವರ್ತಿಸಬೇಕೆಂದು ಬಯಸಿ ಮದ್ದನ್ನು ಹಾಕುವ ಪ್ರಸಂಗಗಳಿವೆ. ಅನೇಕ ಬಾರಿ ಹಾಗೆ ಹಾಕಲ್ಪಟ್ಟ ಗಂಡ ತನ್ನ ಹೆಂಡತಿಯ ಅಂಕಿತದಲ್ಲಿರದೇ ಅವಳ ಆಣತಿಯನ್ನು ಪಾಲಿಸದೆ ಹುಚ್ಚನಾದ ಉದಾಹರಣೆಗಳು ಬೇಕಾದಷ್ಟಿವೆ. ಹಲವು ಗಂಡಂದಿರು ತಮ್ಮ ಸ್ಮರಣ ಶಕ್ತಿಯನ್ನೇ ಕಳೆದುಕೊಂಡು ಸದಾವಕಾಲ ಮಂಕು ಬಡಿದಂತೆ ಮೌನಿಗಳಾಗಿ ತಮ್ಮ ವೃತ್ತಿಯಲ್ಲಿ ಉತ್ಸಾಹ, ಚುರುಕಾದ ಚಟುವಟಿಕೆ ಕಳೆದುಕೊಂಡು ಸೋಮಾರಿಗಳಾಗಿದ್ದಲ್ಲದೇ ಪಶುಗಳಂತೆ ಬದುಕಿದ್ದಾರೆ. ಮತ್ತೆ ಹಲವು ಗಂಡಂದಿರು ವಿಚಿತ್ರ ಮುಂಗೋಪಿಗಳಾಗಿ ಸದಾವಕಾಲ ಸಣ್ಣ ಸಣ್ಣ ವಿಷಯಕ್ಕೂ ಜಗಳವಾಡುವ ಬದಲಾವಣೆ ಹೊಂದಿದ್ದಾರೆ. ಮತ್ತೆ ಹಲವು ಗಂಡಂದಿರು ತಮ್ಮ ವೈಚಾರಿಕತೆಯನ್ನೇ ಕಳೆದುಕೊಂಡ ಚಿಕ್ಕ ಮಕ್ಕಳಂತೆ ಹಟಮಾರಿಗಳಾಗಿದ್ದಾರೆ. ಮತ್ತೆ ಹಲವರು ದೈಹಿಕವಾಗಿ ಕ್ಷೀಣಿಸುತ್ತ ಸಾವನ್ನೇ ಅಪ್ಪಿದ ದಾರುಣ ದುಷ್ಪರಿಣಾಮಗಳು ಸಂಭವಿಸಿವೆ. ಇದರಿಂದ ವಿಧವೆಯರಾದ ಎಷ್ಟೋ ಬುದ್ಧಿಹೀನ ಹೆಂಗಸರು ಪಶ್ಚಾತ್ತಾಪದ ದಳ್ಳುರಿಯಲ್ಲಿ ತಮ್ಮನ್ನು ತಾವೇ ಹಳಿದುಕೊಳ್ಳುತ್ತಿದ್ದಾರೆ. ಆದ್ದರಿಂದ ಇಂಥ ಅನಾಹುತ ತರುವ ಈ ಭೀಕರ ಮೌಢ್ಯದ ವ್ಯಾಮೋಹವನ್ನು ಬಿಟ್ಟು ನಿಮ್ಮ ಸಮಸ್ಯೆಗಳಿಗೆ ಸೂಕ್ತವಾದ, ಮನೋಜ್ಞರ ಅಭಿಪ್ರಾಯವನ್ನೋ ಹಿರಿಯರ ಮಧ್ಯಸ್ಥಿಕೆಯನ್ನೋ ಪಡೆದು ಕ್ಷಮೆ, ದಯೆ, ಉದಾರಗುಣದ ದಾರಿಯನ್ನು ಹಿಡಿದು ತಮ್ಮ ಗಂಡಂದಿರನ್ನು ಸರಿಪಡಿಸಿಕೊಳ್ಳುವುದು ಸಮ್ಮಂಜಸವಾಗಿದೆ. ಅದನ್ನು ಬಿಟ್ಟು ಈ ಹಲಕಾ ಹಾದಿ ಹಿಡಿದು, ಆರಂಭದಲ್ಲಿ ಆ ಮದ್ದಿನಿಂದ ಗಂಡಂದಿರ ಮೆದುಳಿನಲ್ಲಿ ಉಂಟಾಗುವ ಬದಲಾವಣೆ ಕಂಡು ಅದರಲ್ಲಿಯೇ ತಮ್ಮ ಉದ್ದೇಶ ಸಾಫಲ್ಯವಾಯಿತೆಂದು ತಿಳಿದರೆ ಅದರಂಥ ದುರಂತ ಮತ್ತೊಂದಿಲ್ಲ. ಆನುವಂಶಿಕವಾಗಿ ತಂದೆಯ ಈ ಬದಲಾವಣೆ ಹುಟ್ಟುವ ಮಕ್ಕಳ ಮೇಲೂ ಉಂಟಾಗುವ ಭೀಕರ ಪ್ರಸಂಗ ಬರುವ ಸಾಧ್ಯತೆಗಳು ಇರುತ್ತವೆ. ಆದ್ದರಿಂದ ನಮ್ಮ ಸೋದರಿಯರು ಇಂಥ ಮೌಢ್ಯ ಮಾರ್ಗದಿಂದ ದೂರವಿರುವುದು ತುಂಬಾ ಅವಶ್ಯವಾಗಿದೆ.

ಮದ್ದು ಹಾಕುವುದರಿಂದ ನಿಜವಾಗಿ ಫಲಕಾರಿಯಾದ ಪರಿಣಾಮ ದೊರೆತಿದ್ದರೆ ಇಂದು ಇಸ್ಪೀಟ್ ಕ್ಲಬ್‌ಗಳಾಗಲಿ, ಕ್ಯಾಬರೇ ಕ್ಲಬ್‌ಗಳಾಗಲಿ, ಬ್ರಾಂದಿ ಅಂಗಡಿಗಳಾಗಲಿ, ಸಿಗರೇಟ್ ಬೀಡಿ ಫ್ಯಾಕ್ಟ್ರಿಗಳಾಗಲಿ, ಸೂಳೆಯರ ನಿವಾಸಗಳಾಗಲಿ ಇರುತ್ತಲೇ ಇರಲಿಲ್ಲ. ಅಂಥ ಚಟಗಳ ಪುರುಷರನ್ನು ಕಟ್ಟಿಕೊಂಡ ಪ್ರತಿಯೊಬ್ಬ ಹೆಣ್ಣು ತನ್ನ ಗಂಡನನ್ನು ಮದ್ದಿನ ಸಹಾಯದಿಂದ ದೂರಪಿರಿಸುತ್ತಿದ್ದಳು. ಆದರೆ ಮದ್ದು ಫಲಕಾರಿ ಅಲ್ಲವೆಂದೇ ವಿಚಿತ್ರ ಸ್ತ್ರೀಯರು ಅದರಿಂದ ದೂರಪಿದ್ದಾರೆ. ಅದನ್ನು ಎಲ್ಲ ಸ್ತ್ರೀಯರೂ ಅರಿಯಬೇಕಾಗಿದೆ.

ಹಲವು ಬಾರಿ ಹುಡುಗ ಹುಡುಗಿಯರು ವಶೀಕರಣಕ್ಕಾಗಿ ಈ ತೆರನಾದ ಮದ್ದಿನ ಪ್ರಯೋಗ ಅನುಸರಿಸುವುದು ಉಂಟು. ಅದು ಕೂಡಾ ಮೇಲೆ ಹೇಳಿದಂತೆ ಅಪಾಯಕಾರಿ ಎಂಬುದನ್ನು ಗಮನದಲ್ಲಿಡ ಬೇಕಾದದ್ದು ತುಂಬಾ ಅವಶ್ಯ. ಹಾಗೇ ವಶೀಕರಣ ನಿಜವಾಗಿಯೂ ಇದರಿಂದ ಸಾಧ್ಯವಿದ್ದರೆ ಹಿಂದಿನ ರಾಜ ಮಹಾರಾಜರ ಅಂತಪುರದಲ್ಲಿಯ ಅಡಿಗೆಭಟ್ಟರೆಲ್ಲ ಅರಸರಾಗುತ್ತಿದ್ದರು. ಕೊನೆಯಪಕ್ಷ ಅರಸರ ಆಳಿಯಂದಿರಂತೂ ಖಂಡಿತವಾಗಿ ಆಗಲೂ ಸಾಧ್ಯತೆ ಇತ್ತು. ಇಂದಿನ ಹೋಟೇಲ್ ಯುಗದಲ್ಲಂತೂ ಅದರಿಂದ ಬಹಳಷ್ಟು ಏರುಪೇರುಗಳು ನಡೆಯುವ ಸಾಧ್ಯತೆ ಇತ್ತು. ಯಾವುದೇ ಕಚಡಾ ಹೋಟೆಲ್ ಮಾಲೀಕ ಕೂಡಾ ಕೋಟ್ಯಾಧಿಪತಿಯಾಗಬಹುದಿತ್ತು. (ಮದ್ದು ಹಾಕಿ ಗಿರಾಕಿಗಳನ್ನು ಒಲಸಿಕೊಂಡರೆ) ಹೋಟೆಲ್ ಸಪ್ಲಾಯರ್‌ಗಳೆಲ್ಲ ಅಲ್ಲಿಗೆ ತಿಂಡಿಗೆ ಬಂದ ಶ್ರೀಮಂತ ಸುಂದರಿಯರ ಗಂಡಂದಿರಾಗುವುದು ಬಹಳ ಸುಲಭದ ಕೆಲಸವಾಗುತ್ತಿತ್ತಲ್ಲವೇ? ಆದರೆ ಅದರಿಂದ ನಿರ್ದಿಷ್ಟ ಪರಿಣಾಮ ಫಲಕಾರಿ ಆಗದೆಂಬುದರಿಂದ ಹಾಗಾಗಲು ಅವಕಾಶವಿಲ್ಲ. ಆದ್ದರಿಂದ ಪ್ರಿಯ ಬಂಧು ಭಗಿನಿಯರು ಇಂಥ ಹುರುಳಿಲ್ಲದ ಚಟುವಟಿಕೆಗಳಿಗೆ ಮನಸೋಲ ಕೂಡದೆಂದು ಪ್ರಾರ್ಥಿಸುತ್ತೇನೆ.

೬. ಭಾನಮತಿ

ಭಾನಮತಿ ಅಥವಾ ಭೂತ ಪ್ರೇತಗಳ ವಶೀಕರಣ. ಈ ಮೌಢ್ಯವಂತೂ ವಿಪರೀತ ಭಯಾನಕವಾದುದು. ಯಾರನ್ನಾದರೂ ಸಾಯಿಸಬೇಕಾದರೆ ಅಥವಾ ಹಿಂಸಿಸಬೇಕಾದರೆ ಅವರ ಪ್ರತಿರೂಪದ ಬೊಂಬೆಯನ್ನು ಮಾಡಿ ಅದಕ್ಕೆ ಹಿಂಸೆ ಕೊಟ್ಟರೆ ಆ ಹಿಂಸೆ ಸಂಬಂಧಿಸಿದ ವ್ಯಕ್ತಿಗೆ ಆಗುತ್ತದೆ ಎಂದು ಇವರ ನಂಬಿಕೆ. ಇದೂ ಕೂಡಾ ತುಂಬಾ ಉತ್ಪ್ರೇಕ್ಷೆಯಾದ ವಾಡಿಕೆ. ಹಾಗಿದ್ದರೆ ನಮ್ಮ ದೇಶದಲ್ಲಿ ಹಿಂದೆ ಸಾಮ್ರಾಟ ಸಾಮ್ರಾಟರ ನಡುವೆ ಯುದ್ಧಗಳಾಗುವ ಪ್ರಮೇಯಗಳೇ ಇರುತ್ತಿರಲಿಲ್ಲ. ಅಲ್ಲದೆ ಈ ವಿದ್ಯೆಯನ್ನು ಕರಗತ ಮಾಡಿಕೊಂಡವರೇ ಸಾಮ್ರಾಟರಾಗಬಹುದಿತ್ತು. ಹೋಗಲಿ ಆಂಗ್ಲರು ನಮ್ಮ ದೇಶವನ್ನು ಬಿಡುವಂತೆ ಒತ್ತಾಯಿಸಿ ನೂರಾರು ವರ್ಷ ಯುದ್ದ ಸತ್ಯಾಗ್ರಹ ಚಳುವಳಿ ಹೋರಾಟ ನಡೆಸುವುದರ ಅವಶ್ಯವೇನಿತ್ತು? ಆ ಆಂಗ್ಲ ದೊರೆಗಳ ಪ್ರತಿರೂಪ ಮಾಡಿ ಅವರನ್ನು ಇಲ್ಲಿಂದ ಓಡಿಸಿಯೋ ಅಥವಾ ಸಾಯಿಸಿಯೋ ಸುಲಭವಾಗಿ ಸ್ವಾತಂತ್ರ್ಯ ಪಡೆಯಬಹುದಿತ್ತಲ್ಲ?

ಅನೇಕ ದೇಶದ್ರೋಹಿಗಳು ಇಂದೂ ಕೂಡಾ ದೇಶದ ಒಳಹೊರಗೂ ಹೊಂಚುಹಾಕಿ ಕುಳಿತಿದ್ದಾರೆ. ಈ ದೇಶವನ್ನು ಹರಾಜು ಹಾಕಲು ಭಾನಮತಿಗೆ ನಿಜವಾಗಿಯೂ ಅಂಥ ಶಕ್ತಿ ಇದ್ದರೆ ಅಂಥವರ ಪ್ರತಿರೂಪದ ಬೊಂಬೆ ಮಾಡಿ ಅವರೆಲ್ಲರ ಹುಟ್ಟಡಗಿಸಬಹುದಲ್ಲ? ದೇಶದಲ್ಲಿ ವಾಯುಪಡೆ, ನೌಕಾಪಡೆ, ಭೂದಳಗಳೆಂಬ ಯೋಧರನ್ನು ನೇಮಿಸಿ ಕೋಟ್ಯಾಂತರ

ದುಡ್ಡು ಖರ್ಚು ಮಾಡುವುದರ ಬದಲು ಭಾನಮತಿಯ ಜ್ಞಾನಾರ್ಜನೆಯ ವಿದ್ಯಾಲಯಗಳನ್ನು ನಡೆಸಿ ಹಲವು ಪರಿಣಿತ ವ್ಯಕ್ತಿಗಳನ್ನು ಮಾತ್ರ ಶತ್ರುಗಳನ್ನು ಸದೆಬಡಿಯಲು ನೇಮಿಸಿದ್ದರೆ ಸಾಕಿತ್ತು ಅಲ್ಲವೆ? ಇದು ಕೇವಲ ಬಾಯಿಂದ ಬಾಯಿಗೆ ಪ್ರಚಾರ ಗಿಟ್ಟಿಸಿಕೊಂಡ ತಂತ್ರವಾದ್ದರಿಂದ ಇದಕ್ಕೆ ಅಂಥ ಬೆಲೆ ಇಲ್ಲ ಎಂಬುದನ್ನು ಮೇಲಿನ ಸವಾಲುಗಳು ಸ್ಪಷ್ಟಪಡಿಸುತ್ತವೆ.

ಭೂತಪ್ರೇತಗಳ ವಶೀಕರಣದಿಂದ ಈ ವಿದ್ಯೆ ಕರಗತವಾಗುತ್ತದೆ. ಅದಕ್ಕೆ ಇಂಗ್ಲೀಷ್‌ನಲ್ಲೂ ಸಹಾ "ಗ್ರಾಂಡಿಯೋಸ್ ಫ್ಯಾಕ್ಟ್" ಎಂದು ಕರೆಯುತ್ತಾರೆ. ಆದರೆ ನಮ್ಮ ದೇಶದಿಂದ ಇಂತಹ ಕುತೂಹಲಕಾರಿ ಪುಸ್ತಕಗಳು ವಿದೇಶಕ್ಕೆ ಬೇಕಾದಷ್ಟು ಸಾಗಿ ಹೋಗಿವೆ. ಅವರು ಅವುಗಳನ್ನು ತಮ್ಮ ಭಾಷೆಗೆ ಭಾಷಾಂತರಿಸಿಕೊಂಡಿರುವುದು ಸಹಜ. ಈ ಚಟುವಟಿಕೆಗಳಿಗೆ ಆಸಕ್ತರಾಗಿರುವವರು ನಮ್ಮಲ್ಲಿರುವಂತೆ, ವಿದೇಶದಲ್ಲೂ ಇರುವುದರಿಂದಲೇ ಅವರು ಅದನ್ನು ತಮ್ಮ ಭಾಷೆಯಲ್ಲಿ ಬರೆದುಕೊಂಡಿರುವುದು. ಯಾವುದಾದರೊಂದು ವಿಷಯ ಅಂಗ್ಲ ಭಾಷೆಯಲ್ಲಿ ಪುಸ್ತಕ ರೂಪ ತಳೆದರೆ ಅದು ಸತ್ಯ ಶ್ರೇಷ್ಠ ಎಂದು ಭಾವಿಸುವುದು ನಮ್ಮಗಳ ಮೂರ್ಖತನದ ಪರಮಾವಧಿಯಾಗಿದೆ. ನಮ್ಮಲ್ಲಿರುವಂತೆ ಎಲ್ಲಾ ನಾಗರಿಕತೆಯಲ್ಲೂ ಇಂಥ ಮನೋಧರ್ಮದವರಿದ್ದೇ ಇರುತ್ತಾರೆ. ಎಲ್ಲಾ ಕಡೆ ಮೂರ್ಖರು, ಕಿಡಿಗೇಡಿಗಳು, ಸ್ವಾರ್ಥಸಾಧಕರು, ಡಂಗುರಕೋರರೂ ಇದ್ದೇ ಇರುತ್ತಾರೆ. ಅಂತೆಯೇ ಎಲ್ಲಾದೇಶಗಳಲ್ಲೂ ಮನುಷ್ಯ–ಮನುಷ್ಯರಲ್ಲಿಯೇ ಮೇಲು ಕೀಳುಗಳ ತಾರತಮ್ಯ, ಜಾತಿ–ಜಾತಿಗಳ ಗುಂಪುಗಾರಿಕೆಗಳು ನಾಶವಾಗದೇ ಉಳಿದಿವೆ.

ನಾನು ಈ ಪುಸ್ತಕ ಬರೆಯುವ ಸಂದರ್ಭದಲ್ಲಿ ಅನೇಕ ಜನ ಮಾಟ, ಮದ್ದು, ಭಾನಮತಿ, ಅಂತ್ರ, ಮಂತ್ರಗಾರರನ್ನು ಸಂದರ್ಶಿಸಿ ಅವರ ಅಭಿಪ್ರಾಯ ಕೇಳಿರುವೆ. ಅವರಾರಲ್ಲೂ ಈ ಸಂಬಂಧವಾಗಿ ನಿರ್ಧಿಷ್ಟ ಸಿದ್ಧಾಂತದ ತತ್ವಗಳಿಲ್ಲ. ಈ ವ್ಯಕ್ತಿಗಳ ಬಳಿ ಪರಿಹಾರ ಬಯಸಿ ಬರುತ್ತಿದ್ದ ಅನೇಕ ಜನರನ್ನು ವಿಚಾರಿಸಿರುವೆ. ಅವರು ಹೇಳುತ್ತಿದ್ದ ಯಾತನೆಗಳನ್ನು ನಾನು ಡಾಕ್ಟರ್ ಬಳಿಯೂ ಚರ್ಚಿಸಿರುವೆ. ಡಾಕ್ಟರ್ ಅಭಿಪ್ರಾಯದಂತೆ ಅವೆಲ್ಲ ಒಂದಲ್ಲ ಒಂದು ರೋಗದ ಲಕ್ಷಣಗಳೇ ಆಗಿದ್ದವು. ಆದರೆ ಆ ಜನ ತಮಗೆ ಮಾಟ ಮಾಡಿದ್ದಾರೆ, ಮದ್ದು ಹಾಕಿದ್ದಾರೆ ಎಂದು ಭಾವಿಸಿಕೊಂಡಿದ್ದು ಎಷ್ಟು ಹುಚ್ಚುತನವೆಂಬುದನ್ನು ಮನಗಂಡ ನಾನು ಆಕ್ರೋಶಗೊಂಡು ಅಂಥ ಮೂಢರಿಗಾಗಿ ಈ ಪುಸ್ತಕ ಬರೆಯತೊಡಗಿದೆ.

ಅನೇಕ ಮಾಯಾವಿ ಮಂತ್ರವಾದಿಗಳ ಜೊತೆ ನಾನು ಸಂದರ್ಶನ ನಡೆಸಿದ ಸಂದರ್ಭದಲ್ಲಿ ಅವರು ಯಾವುದನ್ನೂ ಹೇಳಲು ಇಚ್ಛಿಸಲಿಲ್ಲ. ಹಲವರು ಬರಿ ಢಂಬಾಚಾರದ ಚಟುವಟಿಕೆಗಳನ್ನು ನಿದರ್ಶನವಾಗಿ ಹೇಳಿದಂತ ಕಥೆಗಳಂತೆ ಭಾಸವಾಯಿತು. ಹಲವರು ನನ್ನನ್ನು ಕೆಂಗಣ್ಣಿನಿಂದ ಸುಟ್ಟು ಬಿಡುವಂತೆ ನೋಡಿದ್ದುಂಟು. ಬಹುತೇಕ ಜನ ಆ ನೋಟಕ್ಕೆ

ಅವರಿಗೆ ಎದುರಾಳಿಯಾಗದೇ ಸೋತು ಶರಣಾಗತರಾಗುವ ಲಕ್ಷಣಗಳಾಗಿದ್ದವು. ಅಲ್ಲಿಯ ಪರಿಸರ ಅವರ ವಿಕಾರ ವ್ಯಕ್ತಿತ್ವ ಎಂಥ ಎದೆಗಾರಿಕೆಯುಳ್ಳವನನ್ನೂ ಸದೆಬಡಿಯುವಂತಿರುತ್ತದೆ. ಆಗ ಜನ ಸಾಮಾನ್ಯರು ಬೌದ್ಧಿಕವಾಗಿ ನಿರಾತಂಕವಾಗಿ ಅವರಿಗೆ ಸೆರೆಯಾಳಾಗುವುದು ಸಹಜ. ಆದರೆ ನನ್ನ ಹುಟ್ಟೂರಿನಲ್ಲಿಯೇ ಇರುವ ಒಬ್ಬ ಈ ತಂತ್ರಗಳ ವ್ಯಕ್ತಿ ಮಾತ್ರ ನನ್ನ ಪ್ರಶ್ನೆಗಳಿಗೆ ಮನಬಿಟ್ಟು ಉತ್ತರಿಸಿದ. "ಇದರಲ್ಲಿ ಮಂತ್ರ ಗಿಂತ್ರ ಭೂತ ಪಿಶಾಚಿ ಮದ್ದು ಅದು ಇದು ಏನೂ ಇಲ್ಲ. ನಾನು ಶುದ್ಧ ಮನಸ್ಸಿನಿಂದ, ನನ್ನನ್ನು ನಂಬಿ ಬಂದವರಿಗೆ ಒಳ್ಳೆಯದಾಗಲೆಂದು ದೇವರನ್ನು ಧ್ಯಾನಿಸಿ ಈ ತಾಮ್ರದ ತಗಡಿನಲ್ಲಿ(ಅಂತ್ರ) ದೇವರ ಹೆಸರನ್ನು ಬರೆದು ಅವರಿಗೆ ಕಟ್ಟುತ್ತೇನೆ ಅಷ್ಟೇ. ಇನ್ನು ಮಿಕ್ಕಿದ್ದಕ್ಕೆ ಅವರವರ ದೈಹಿಕ ತೊಂದರೆಗಳನ್ನು ಗಮನಿಸಿ ಪ್ರಸಾದ ರೂಪದಲ್ಲಿಯೇ ಔಷಧಿಯನ್ನು ಹಣ್ಣು ಗಿಡ ಮೂಲಿಕೆಗಳನ್ನು ಕೊಡುತ್ತೇನೆ. ಆದರೆ ಜನ ನನ್ನನ್ನು ಮಂತ್ರಗಾರ, ಮಾಟಗಾರ ಎಂದೇ ಭಾವಿಸುತ್ತಾರೆ." ಎಂದು ಆತ ಸತ್ಯಾಂಶ ಹೇಳಿದಾಗ ನನಗೆ ಸಮಾಧಾನವಾಯಿತು. ಆತ ನನ್ನ ಅನೇಕ ಸಲಹೆಗಳನ್ನೂ ಒಪ್ಪಿಕೊಂಡ.

ಇಂಥ ಚಟುವಟಿಕೆಯ ಭೀಕರ ಮೌಢ್ಯಗಳಿಗೆ ಮಾರುಹೋಗಿ ಹಣ, ವೇಳೆ, ಆರೋಗ್ಯ, ಮಾನಸಿಕ ನೆಮ್ಮದಿ ಕಳೆದುಕೊಂಡು ಕೊನೆಗೆ ಪ್ರಾಣಹಾನಿ ಮಾಡಿಕೊಳ್ಳುವವರೇ ಅಧಿಕ. ಆದ್ದರಿಂದ ಇಂಥವುಗಳಿಂದ ದೂರವಾಗಿದ್ದು ನಿಮ್ಮ ಸಮಸ್ಯೆಗಳಿಗೆ ವೈಜ್ಞಾನಿಕವಾದ ವೈಚಾರಿಕ ಪರಿಹಾರದತ್ತ ಯೋಚಿಸಬೇಕು. ಇಲ್ಲವಾದರೆ ನಂದಗೋಕುಲದಂತಿರುವ ನಿಮ್ಮ ಸುಂದರ ಸಂಸಾರ ಸ್ಮಶಾನವಾಗುವುದರಲ್ಲಿ ಸಂದೇಹವಿಲ್ಲ.

೭. ಮಕ್ಕಳಿಲ್ಲದವರು

ಹಲವು ಊರುಗಳಲ್ಲಿ ಜಾತ್ರೆಯ ದಿನ ಮಕ್ಕಳಾಗದ ಹೆಂಗಳೆಯರು ತೇರಿನ ಅಡಿಗೆ ಬಂದು ಭಕ್ತಿಯಿಂದ ಮಲಗುತ್ತಾರೆ. ಅಲ್ಲಿ ಇದಕ್ಕಾಗಿಯೇ ಕಾಯ್ದು ನಿಂತ ಕಾಮುಕರು (ಸರತಿಯಂತೆ) ತೇರಿನ ಅಡಿಗೆ ಹೋಗಿ ಆಕೆಯ ಜೊತೆ ಮಲಗುತ್ತಾರೆ. ಆ ಹೆಣ್ಣು ಈ ಕಾಮುಕನನ್ನು ಒಬ್ಬ ವ್ಯಕ್ತಿ ಎಂದು ಭಾವಿಸದೇ ಸಾಕ್ಷಾತ್ ದೇವರೇ ಅವನ ರೂಪದಲ್ಲಿ ಬಂದಿರುವನೆಂದು ಆತನ ಇಚ್ಛೆಯನ್ನು ಪೂರ್ಣ ಮಾಡುತ್ತಾಳೆ. ನಂತರ ಮುಂದಿನ ವರ್ಷ ಮಗುವಿನ ಜೊತೆಗೇ ನಿನ್ನ ದರ್ಶನಕ್ಕೆ ಬರುವೆ ಎಂದು ಆ ಲಂಪಟನ ಕಾಲಿಗೆ ನಮಸ್ಕರಿಸಿ ಅಲ್ಲಿಂದ ಮೇಲೆದ್ದು ಈಚೆ ಬರುತ್ತಾಳೆ. ಆಗ ಮತ್ತೊಬ್ಬ ಸಂತಾನಾರ್ಥಿ ಅಲ್ಲಿ ಮಲಗುತ್ತಾಳೆ. ಸರತಿಯಲ್ಲಿಯ ಇನ್ನೊಬ್ಬ ಕಾಮುಕ ತೇರಡಿಗೆ ನುಗ್ಗುತ್ತಾನೆ. ಹೀಗೆ ಈ ಕಾರ್ಯ ಬೆಳಗಿನ ಜಾವ ಮೂರು ಗಂಟೆಯಿಂದ ಬೆಳಗಿನ ಆರು ಗಂಟೆಯವರೆಗೂ ನಡೆಯುತ್ತದೆ. ಇದು ಭಕ್ತಿಯ ಹೆಸರಿನಲ್ಲಿ ಸಮಸ್ತ ನಾಗರೀಕರಸಮಕ್ಷಮದಲ್ಲಿಯೇ ಸಾಗುವ ಸಾರ್ವಜನಿಕ ಸೂಳೆಗಾರಿಕೆ ಯಲ್ಲವೆ?

ಇನ್ನು ಹಲವು ಊರುಗಳಲ್ಲಿ ಮಕ್ಕಳಾಗದ ಹೆಂಗಳೆಯರು ಬೆಳಗಿನ ಜಾವ ಬೆತ್ತಲೆಯಾಗಿ ಬಂದು ಕೆರೆ ದಂಡೆಯ ಮೇಲಿರುವ ಕಲ್ಲು ದೇವರುಗಳನ್ನು ತಬ್ಬಿದರೆ ಅಂಥವರಿಗೆ

ಮಕ್ಕಳಾಗುತ್ತವೆ ಎಂಬ ಮೂಢ ಪ್ರತೀತಿ. ಇದರಲ್ಲಿ ಗೊಮ್ಮಟೇಶ್ವರನ ವಿಗ್ರಹಕ್ಕೆ ಪ್ರಾಶಸ್ತ್ಯವಿದೆ. ಆದರೆ ಇದು ಎಷ್ಟು ಹಾಸ್ಯಾಸ್ಪದ ಹಾಗೂ ಕ್ಷುಲ್ಲಕ ನಂಬಿಕೆ! ಇದರಿಂದ ನಮ್ಮ ದೇವರುಗಳ ಮೇಲಿದ್ದ ಭಕ್ತಿ ನಂಬಿಕೆಗಳು ಕುಸಿಯಬಹುದೇ ವಿನಃ ಉದ್ದೇಶ ಸಾಫಲ್ಯ ಸಾಧ್ಯವಾದೀತೆ? ಪ್ರತಿದಿನವೂ ಪ್ರತ್ಯಕ್ಷ ದೇವರಾದ ಗಂಡನನ್ನು ತಬ್ಬಿರುವಾಗಲೂ ಮಕ್ಕಳಾಗದಿರುವಾಗ ಕಲ್ಲು ಪ್ರತಿಮೆಯನ್ನು ಒಂದು ಕ್ಷಣ ತಬ್ಬಿದರೆ ಮಕ್ಕಳಾಗುವುದುಂಟೆ? ನಮ್ಮ ಜನರ ವೈಚಾರಿಕತೆಗೆ ಏನನ್ನು ಬೇಕು? ಪ್ರನಾಳಿಕೆ ಶಿಶುವಿನ ಜನನದ ಈ ಕಾಲದಲ್ಲೂ ಇಂಥ ಮೂಢಾಚಾರಗಳು ನಡೆಯುತ್ತಿರಬೇಕಾದರೆ ಇದು ನಮ್ಮ ನಾಗರಿಕತೆಯ ದೌರ್ಬಲ್ಯವೇ ಸರಿ.

ಹಲವು ಕಡೆ ಹೆಂಗಳೆಯರು ತಮಗೆ ಮಕ್ಕಳಾಗಬೇಕಾದರೆ ಬೇರೆಯವರ ಮಕ್ಕಳನ್ನು ಹಿಂಸಿಸಿದರೆ ಅಥವಾ ಸಾಯಿಸಿದರೆ ತಮಗೆ ಮಕ್ಕಳಾಗುತ್ತವೆ ಎಂಬ ನಂಬಿಕೆಯ ರಾಕ್ಷಸೀ ವರ್ತನೆ ಆಚರಣೆಯಲ್ಲಿದೆ. ಅದಕ್ಕಾಗಿ ಇತರರ ಮಕ್ಕಳಿಗೆ ಗುಟ್ಟಾಗಿ ಗೇರು (ಕೇರು) ಹಾಕುವುದು, ಮಗುವಿನ ಮೈಗೆ ಕಳ್ಳಿ ಹಾಲು ಲೇಪಿಸುವುದು, ತಿಂಡಿ ತಿನಿಸುಗಳಲ್ಲಿ ಮಾರಕ ಪದಾರ್ಥ ಮಿಶ್ರಣ ಮಾಡಿ ಕೊಡುವುದು, ಮುಂತಾದ ಹೀನ ಪ್ರವೃತ್ತಿಗಳಿಂದ ಅನೇಕ ಹಸುಗೂಸುಗಳು ಅಸುನೀಗುತ್ತಿವೆ. ಹೀಗೆ ಸತ್ತ ಮಕ್ಕಳು ತಮ್ಮ ಹೊಟ್ಟೆಯಲ್ಲಿ ಹುಟ್ಟಿ ಬರುತ್ತವೆ ಎಂಬ ಅಮಾನುಷ ಮೂಢನಂಬಿಕೆಯಿಂದ ಸುಂದರ ಹಾಗೂ ಆಕರ್ಷಕವಾದ ಮಕ್ಕಳನ್ನೇ ಈ ರೀತಿ ಬಲಿತೆಗೆದುಕೊಳ್ಳುತ್ತಾರೆ. ಇದು ಎಷ್ಟು ಭೀಭತ್ಸಕರ!

ನಿಮಗೆ ಮಕ್ಕಳಿಲ್ಲದೇ ಹೋದರೆ ಪರಿಣಿತ ವೈದ್ಯರಲ್ಲಿ ಹೋಗಿ ತಪಾಸಣೆ ಮಾಡಿಸಿ ಮಕ್ಕಳಾಗಲು ತಕ್ಕ ಮಾರ್ಗ ಕಂಡುಕೊಳ್ಳಿ ಅದಕ್ಕೂ ಸಾಧ್ಯವಾಗದಿದ್ದರೆ ನೀವು ಸಾಯಿಸಲು ಯತ್ನಿಸುವ ಮಗನನ್ನ ನೀವೇ ಪಡೆದು ಸಾಕಿಕೊಳ್ಳಿ. ಅಥವಾ ದತ್ತಕ್ಕೆ ಪಡೆದುಕೊಳ್ಳಿ. ಹೆತ್ತ ಮಗನಾದರೇನು ಸಾಕಿದ ಮಗನಾದರೇನು? ನೀವು ಬೆಳೆಸುವ ಮಗು ನಿಮಗೂ ನಿಮ್ಮ ರಾಷ್ಟ್ರಕ್ಕೂ ಹೊರೆಯಾಗದೇ ಆಸ್ತಿಯಾಗಬೇಕಲ್ಲವೇ? ಆ ತೆರನಾಗಿ ಯೋಚಿಸದೇ ಇಂಥ ಘೋರ ಕೃತ್ಯಕ್ಕಿಳಿದರೆ ನಿಮಗೆ ಈ ಜನ್ಮದಲ್ಲಿ ಅಷ್ಟೇ ಅಲ್ಲ ಜನ್ಮ ಜನ್ಮಾಂತರದಲ್ಲೂ ಮಕ್ಕಳಾಗಲು ಸಾಧ್ಯವೇ? ಎಂಬುದನ್ನು ಈ ಭೀಕರ ಮೌಢ್ಯಗಳ ಕಾರ್ಗತ್ತಲಿನಿಂದ ವೈಚಾರಿಕತೆಯ ಬೆಳಕಿಗೆ ಬಂದು ವಿವೇಚಿಸಿರಿ.

೧೯೮೯

ಡಿ.ಎ.ಉಪಾಧ್ಯ,
ಮೈಸೂರು.

ಟಿಪ್ಪಣಿ

"ಸತ್ಯಸಾಕ್ಷಾತ್ಕಾರದ ಅನುಭವವನ್ನು ಕಂಡುಕೊಳ್ಳುವ ಈ ವಿದ್ಯೆಗೆ 'ವಿಪಸ್ಸನ ಧ್ಯಾನ 'ವೆಂದು ಹೆಸರು. ಸಾಮಾನ್ಯವಾಗಿ 'ಪಸ್ಸನ' ಎಂದರೆ ತೆರೆದ ಕಣ್ಣುಗಳಿಂದ ನೋಡುವುದು ಎಂದರ್ಥ. ಆದರೆ 'ವಿಪಸ್ಸನ' ಎಂದರೆ ವಸ್ತುವು ಹೇಗಿದೆಯೋ ಹಾಗೆಯೇ ಅಂತರ್ದೃಷ್ಟಿಯಿಂದ ನೋಡುವುದೇ ಹೊರತು ಅದು ಹೇಗೆ ತೋರುತ್ತದೆಯೋ ಅದರಂತೆ ಅಲ್ಲ. ಈ ಸಾಧನೆಯಿಂದ ತೋರಿಕೆಯ ಸತ್ಯತೆಯು ಭೇದಿಸಲ್ಪಟ್ಟು ಇಡೀ ಭೌತಿಕ ಮತ್ತು ಮಾನಸಿಕ ರಚನೆಗೆ ಅತೀತವಾದ ಸತ್ಯತೆಯು ಅರಿವಿಗೆ ನಿಲುಕುತ್ತದೆ. ಈ ಸತ್ಯತೆಯ ಅನುಭವವಾದಾಗ ವಿವೇಚನೆಯಿಲ್ಲದೆ ಪ್ರತಿಕ್ರಿಯೆ ತೋರುವ ಪ್ರವೃತ್ತಿಯು ನಿಂತು ಹೊಸ ಸಂಸ್ಕಾರಗಳ ಉತ್ಪತ್ತಿ ನಿಲ್ಲುತ್ತದೆ. ಇದರ ಪರಿಣಾಮವಾಗಿ ಮನಸ್ಸಿನ ಹಳೆಯ ಸಂಸ್ಕಾರಗಳೂ ಪ್ರಕೃತಿ ನಿಯಮಕ್ಕನುಸಾರವಾಗಿ ಹೊರಬಂದು ಕ್ರಮೇಣ ನಶಿಸಿಹೋಗುತ್ತವೆ. ಹೀಗೆ ಎಲ್ಲ ದುಃಖಗಳೂ ದೂರವಾಗಿ ಆನಂದವೇ ಲಭ್ಯವಾಗುತ್ತದೆ.

"ಈ ಸಾಧನೆಯಲ್ಲಿ ಮೂರು ಹಂತಗಳಿವೆ: ಮೊದಲನೆಯ ಅತ್ಯಂತ ಆವಶ್ಯಕವಾದ ಹಂತವೆಂದರೆ 'ಶೀಲ'. – 'ಸದಾಚಾರ'ದ ಐದು ನಿಯಮಗಳನ್ನು ಪಾಲಿಸುವುದು: ಜೀವಹತ್ಯೆ ಮಾಡದಿರುವುದು; ಸುಳ್ಳು ಹೇಳದಿರುವುದು; ಕದಿಯದಿರುವುದು; ಲೈಂಗಿಕ ಸಂಯಮತೆ ಮತ್ತು ಮಾದಕ ವಸ್ತುಗಳನ್ನು ಸೇವಿಸದಿರುವುದು. ಈ ನಿಯಮಗಳಿಗೆ ಬದ್ಧನಾಗಿರುವುದು. ಈ ನಿಯಮಗಳನ್ನು ಪಾಲಿಸದೆ ಇದ್ದಲ್ಲಿ ಇತರರ ಶಾಂತಿ ಮತ್ತು ನೆಮ್ಮದಿಗೆ ಭಂಗವುಂಟಾಗುವುದು ಮಾತ್ರವಲ್ಲದೆ ಅಕುಶಲ ಶಾರೀರಿಕ ಮತ್ತು ವಾಚಿಕ ಕರ್ಮಗಳಿಂದ ನಮ್ಮ ಮನಸ್ಸಿನ ಮಾಲಿನ್ಯವೂ ದೂರವಾಗುವುದಿಲ್ಲ. ಶೀಲದ ಪಾಲನೆಯಿಂದ ಮನಸ್ಸು ಸಾಕಷ್ಟು ಶಾಂತವಾಗಿ ತನ್ನ ಮುಂದಿನ ಕಾರ್ಯವನ್ನು ಕೈಗೊಳ್ಳಲು ಸಿದ್ಧವಾಗುತ್ತದೆ.

"ಸಾಧನೆಯ ಮುಂದಿನ ಹಂತವೇ 'ಸಮಾಧಿ'. ಮನಸ್ಸನ್ನು ಪಳಗಿಸಿ ಅದನ್ನು ಯಾವುದಾದರೂ ಒಂದೇ ವಸ್ತುವಿನ ಮೇಲೆ ದೃಢವಾಗಿ ನಿಲ್ಲುವಂತೆ ಮಾಡಿ ಅದನ್ನು ವಶಪಡಿಸಿಕೊಳ್ಳುವುದು. ಸಾಧಕನ ಸ್ವಾಭಾವಿಕ ಉಸಿರು ಇದಕ್ಕೆ ಅವಲಂಬನೆ. ಸ್ವಾಭಾವಿಕವಾದ ಉಸಿರಾಟದ ಮೇಲೆಯೇ ಸಾಧ್ಯವಾಗುವಷ್ಟು ಕಾಲ ಮನಸ್ಸನ್ನು ನಿಲ್ಲಿಸಲು ಪ್ರಯತ್ನಿಸುವುದು. ಇದು ಉಸಿರಾಟದ ವ್ಯಾಯಾಮವಲ್ಲ; ಅಥವಾ ಉಸಿರನ್ನು ನಿಯಂತ್ರಿಸುವ ಪ್ರಾಣಾಯಾಮವೂ ಅಲ್ಲ. ಮೂಗಿನ ಪ್ರದೇಶದಲ್ಲಿ ಬಂದು ಹೋಗುತ್ತಿರುವ ಉಸಿರಾಟವನ್ನು ಗಮನಿಸುವುದು ಮಾತ್ರ. ಇದರಿಂದ ಮನಸ್ಸು ಉಗ್ರವಿಕಾರ ಭಾವನೆಗಳಿಗೆ ಒಳಗಾಗದೆ ಶಾಂತವಾಗುತ್ತದೆ. ಹಾಗೂ ಅದು ಏಕಾಗ್ರ ಮತ್ತು ಸೂಕ್ಷ್ಮವಾಗಿ ಮುಂದಿನ ಹಂತವಾದ ಅಂತರ್ದೃಷ್ಟಿಯ ಕಾರ್ಯಕ್ಕೆ ನೆರವಾಗುತ್ತದೆ.

" 'ಶೀಲ' – ಸದಾಚಾರ ಜೀವನ ನಡೆಸುವುದು ಮತ್ತು 'ಸಮಾಧಿ' – ಮನಸ್ಸನ್ನು ಹತೋಟಿಗೊಳಪಡಿಸುವುದು; ಈ ಎರಡು ಹಂತಗಳು ನಮಗೆ ಆವಶ್ಯಕವಾಗಿದ್ದು ಪ್ರಯೋಜನಕಾರಿಯಾಗಿಯೇನೋ ಇವೆ. ಆದರೆ ನಮ್ಮ ಸ್ವಂತ ಪ್ರಕೃತಿಯ ಅಂತರ್ದೃಷ್ಟಿಯನ್ನು ಬೆಳೆಸಿ ಮನಸ್ಸಿನ ವಿಕಾರಗಳನ್ನು ಕಳೆಯುವ ಮೂರನೆಯ ಹಂತಕ್ಕೆ ತಲುಪದಿದ್ದರೆ ಅವು ಬರೀ ಆತ್ಮದಮನಕ್ಕೆ ಎಡೆಮಾಡಿಕೊಡುವುವು. ತನ್ನೊಳಗೆ ಸತತ ಬದಲಾವಣೆಯಾಗುತ್ತಿರುವ ಸಂವೇದನೆಗಳನ್ನು ಕ್ರಮಬದ್ಧವಾಗಿ ಮತ್ತು ಸಮತಾಭಾವದಿಂದ ಗಮನಿಸಿ ತನ್ನ ನಿಜ ಸ್ವರೂಪದ ಅನುಭವ ಮಾಡಿಕೊಳ್ಳುವುದೇ ನಿಜವಾದ ವಿಪಸ್ಸನ. ಈ ಮೂರನೆಯ ಹಂತವೇ 'ಪ್ರಜ್ಞೆ'. ಆತ್ಮ ನಿರೀಕ್ಷಣೆಯಿಂದ ಆತ್ಮ ಶುದ್ಧಿ – ಇದೇ ಬುದ್ಧನ ಬೋಧನೆಯ ಪರಾಕಾಷ್ಠೆ. ಇದನ್ನು ಯಾರು ಬೇಕಾದರೂ ಅಭ್ಯಾಸ ಮಾಡಬಹುದು."

ಸತ್ಯನಾರಾಯಣ ಗೋಯೆಂಕಾ, 'ಜೀವನ ಕಲೆ – ವಿಪಸ್ಸನ ಧ್ಯಾನ,' ವಿಪಶ್ಯನ ಧ್ಯಾನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು, ಪುಟಗಳು: ೮ ರಿಂದ ೧೦.

ಕೊಡುಗೆ : 10 ರೂ.ಗಳು